# ಕಂಪು

ಕನ್ನಡಿಗರ ಪೆಂಪು

ಮಲ್ಲಿಗೆ ಕನ್ನಡ ಸಂಘ ಉತ್ತರ ಟೆಕ್ಸಾಸ್

Mallige Kannada Assoc. of North Texas


# ಮಕರ ಸಂಕ್ರಾಂತಿ

# ಹಬ್ಬದ

# ಹಾರ್ದಿಕ ಶುಭಾಶಯಗಳು



# ಪರಿವಿಡಿ


| | | |
|---|---|---|
| ಅಧ್ಯಕ್ಷರ ಸಂದೇಶ | | ಶ್ರೀವತ್ಸ ರಾಮನಾಥನ್ |
| ದೀಪಾವಳಿ | ವರದಿ | ರೇಖಾ ಪ್ರಕಾಶ್ |
| ಕಾವೇರಿ ಮಾತೆ | ಕವನ | ಕೆ.ಎಲ್.ಸುಬ್ಬಲಕ್ಷ್ಮಮ್ಮ |
| ಲಾಲ್ ಬಾಗ್‌ನ ಗರ್ಭಗುಡಿ | ಲೇಖನ | ನವ್ಯ ಎಸ್. |
| ಹೀಗೊಂದು ಸಂಕ್ರಾಂತಿ | ಲೇಖನ | ಸಂಧ್ಯಾ ಹೊನ್ನವಳ್ಳಿ |
| ನಮ್ಮ ಸಂಸ್ಕೃತಿ | ಲೇಖನ | ಹರಿಚರಣ್ ಮೈಲಾರಯ್ಯ |
| College Prep Seminar | ವರದಿ | ಅವನಿ&ಅರ್ಣವ್ ಕಶ್ಯಪ್ |
| ಕೇಫ | ಸಾಹಿತಿ ಮಾಹಿತಿ | ಗುರುಪ್ರಸಾದ್ ವೆಂಕಟರಾಮು |
| ಯಕ್ಷಪ್ರಶ್ನೆ | ಕವನ | ವಾಸು ಪೋತದಾರ |
| ಕೇಳು ಒಲವೇ | ಕವನ | ಶಶಿಕಿರಣ್ |
| ನಿರೀಕ್ಷೆ | ಕವನ | ಪೂರ್ಣಿಮಾ ಸುಬ್ರಹ್ಮಣ್ಯ |
| ಲೂಸಿಯಾ | ಮಕ್ಕಳ ಲೇಖನ | ಯಾಮಿನಿ ಜೋಯಿಸ್ |
| ಗಣೇಶ | ಮಕ್ಕಳ ಚಿತ್ರಕಲೆ | ಸ್ಕಂದ ಸುನೀಲ್ |
| ರಂಗೋಲಿ | ಮಕ್ಕಳ ಲೇಖನ | ಸ್ತುತಿ ಸುನೀಲ್ |
| ಸಂಕ್ರಾಂತಿ | ಮಕ್ಕಳ ಲೇಖನ | ವಿಶೇಷ್ ಪ್ರಸಾದ್ |
| ಕ್ಲಾರಿನೆಟ್ | ಮಕ್ಕಳ ಲೇಖನ | ಐಸಿರಿ ಪ್ರಸಾದ್ |
| ಹಿಜಾಬ್ | ಪುಸ್ತಕ ಪರಿಚಯ | ಗುರುಪ್ರಸಾದ್ ವೆಂಕಟರಾಮು |



# ಅಧ್ಯಕ್ಷರ ಸಂದೇಶ

**ವತ್ಸ ರಾಮನಾಥನ್**

ಮಲ್ಲಿಗೆ ಕನ್ನಡ ಸಂಘದ ಸದಸ್ಯರಿಗೆ ನನ್ನ ಪ್ರೀತಿಯ ನಮಸ್ಕಾರಗಳು,

ಈ ನನ್ನ ಸಂದೇಶದಲ್ಲಿ, ೨೦೧೭ ರಲ್ಲಿ ನಡೆದ ಮಲ್ಲಿಗೆ ಕನ್ನಡ ಸಂಘದ ಚಟುವಟಿಕೆಗಳನ್ನು ಅವಲೋಕಿಸಿ, ಮುಂದೆ ಬರುವ ವರ್ಷದ ಕಾರ್ಯಕ್ರಮಗಳ ಸಂಕ್ಷಿಪ್ತ ಯೋಜನೆಯನ್ನು ನಿಮಗೆ ತಿಳಿಸಬಯಸುತ್ತೇನೆ.

ಸಂಕ್ರಾಂತಿ ಸಂಭ್ರಮದೊಂದಿಗೆ ಪ್ರಾರಂಭಿಸದ ವರ್ಷ  ಬಹಳ ವಿಜೃಂಭಣೆಯಿಂದ ಸಾಗಿ ಹಲವಾರು ಯಶಸ್ವಿ ಕಾರ್ಯಕ್ರಮಗಳನ್ನು ಕಂಡಿತು. ಸ್ಥಳೀಯ ಹೊಸ ಪ್ರತಿಭೆಗಳಿಗೆ ನಮ್ಮ ಕಾರ್ಯಕ್ರಮಗಳಲ್ಲಿ ಅವಕಾಶ ಕಲ್ಪಿಸಿಕೊಟ್ಟು ಪ್ರೋತ್ಸಾಹಿಸಿದೆವು. ಬಾಳೆ ಎಲೆ ಊಟದ ಸವಿಯುಂಡೆವು !!  ಮಂಜುಳಾ ಗುರುರಾಜ್, ಬದ್ರಿಪ್ರಸಾದ್, ಗಣೇಶ್ ದೇಸಾಯಿ ಇವರಂಥ  ಕರ್ನಾಟಕದ ಕೆಲವು ಪ್ರತಿಭಾವಂತ ಕಲಾವಿದರ ಕಾರ್ಯಕ್ರಮಗಳನ್ನು ಆಯೋಜಿಸಿ ನಮ್ಮ ಸದಸ್ಯರುಗಳ ಮನರಂಜಿಸಿದೆವು. ಉಗಾದಿ ಮತ್ತು ದೀಪಾವಳಿ ಜೊತೆಗೆ ಸಂಕ್ರಾಂತಿ ಹಬ್ಬವನ್ನು ಆಚರಿಸುವ ಹೊಸ  ಪ್ರವೃತ್ತಿಯನ್ನು ಪ್ರಾರಂಭಿಸಿದೆವು. ಅಷ್ಟೇ ಅಲ್ಲದೆ ಸಾಂಪ್ರದಾಯಿಕವಲ್ಲದ, ಹೊಸ ತರಹದ, "ಶಿಶಿರ ಸಂಭ್ರಮ" ಕಾರ್ಯಕ್ರಮವನ್ನು ಆಯೋಜಿಸಿ ಹೊಸದಾಗಿ ಡಲ್ಲಾಸ್ ನಗರಕ್ಕೆ ಬಂದಿರುವವರಿಗೆ ಅನೌಪಚಾರಿಕ ವಾತಾರಣದಲ್ಲಿ ಜನರನ್ನು ಭೇಟಿ ಮಾಡಿ ಪರಿಚಯ ಮಾಡಿಕೊಳ್ಳುವ ಅವಕಾಶ ಕಲ್ಪಿಸಿದೆವು. ನಮ್ಮ ಕನ್ನಡ ಮಕ್ಕಳಿಗೆ ಕಾಲೇಜಿಗೆ ಅರ್ಜಿ ಹಾಕುವ, ಕಾಲೇಜುಗಳನ್ನು ಆಯ್ಕೆ ಮಾಡುವ ಮತ್ತು ಅದರಲ್ಲಿ ಇರುವ ಸೂಕ್ಷ್ಮತೆಗಳ ಬಗ್ಗೆ ಒಂದು ವಿಚಾರ ಸಂಕಿರಣ ಏರ್ಪಡಿಸಿದ್ದೆವು.

ನಮ್ಮ ಕಾರ್ಯಕಾರಿ ಸಮಿತಿಯ ಸಹಾಯಕ್ಕೆ, ಹೊಸ ಕಾರ್ಯಪಡೆಯ ಜೋಡಣೆಯಿಂದ ನಮ್ಮ ಕೆಲಸಗಳನ್ನು ಹಂಚಿಕೊಂಡು  ಪರಿಣಾಮಕಾರಿಯಾಗಿ ನಿರ್ವಹಿಸುವ ಕ್ರಮವನ್ನು ಪ್ರಾರಂಭಿಸಿದೆವು. ಬಹಳ ಉತ್ಸಾಹಕಾರಿ ಯುವಕ ಯುವತಿಯರ ಈ ಜೋಡಣೆಯಿಂದ ಹೊಸ ಹೊಸ ವಿಚಾರಗಳು, ಹೊಸ ರೀತಿಯ ಕಾರ್ಯಕ್ರಮಗಳು, ನಮ್ಮ ಕನ್ನಡ ಸಂಘಕ್ಕೆ ಹೊಸ ತಿರುವನ್ನು ಕೊಡುವುದರಲ್ಲಿ ಸಂಶಯವಿಲ್ಲ. ಈ ಹೊಸ ಪೀಳಿಗೆಯ ನಾಯಕತ್ವವನ್ನು  ತುಂಬು ಹೃದಯದಿಂದ ಸ್ವಾಗತಿಸುತ್ತೇನೆ!

ಇನ್ನೊಂದು ಬಹಳ ಮುಖ್ಯವಾದ ಸಂಗತಿ - ನಮ್ಮ ಕನ್ನಡ ಸಂಘ, ಮೈಸೂರಿನಲ್ಲಿ ಇರುವ "ನಿರೀಕ್ಷೆ" ಎನ್ನುವ ವಿಶೇಷ ಮಕ್ಕಳ ಶಾಲೆಯ ಸಹಾಯಕ್ಕೆ ೨೦೧೭ ರಲ್ಲಿ ನಿಧಿಸಂಗ್ರಹಣೆಯ ಜವಾಬ್ದಾರಿ ವಹಿಸಿತ್ತು. ನಮ್ಮ ಡಲ್ಲಾಸ್  ಕನ್ನಡಿಗರ ಔದಾರ್ಯತೆ ಮತ್ತು ಸಹಾಯ ಮನೋಭಾವದಿಂದ ನಾವು ಆ ಶಾಲೆಗೆ ಒಟ್ಟು $೬೦೦೦(ಆರು ಸಾವಿರ) ಹಣವನ್ನು ಸಂಗ್ರಹಿಸಿ ಕಳುಹಿಸಿದೆವು. "ಪ್ರೇರಣಾ" ಸಂಗೀತ ಸಂಜೆಯನ್ನು ಏರ್ಪಡಿಸಿದ ನಮ್ಮ ಸದಸ್ಯರಿಂದ ಬಹಳ ಸಹಾಯವಾಯಿತು, ಇದಕ್ಕೆ ಸಹಾಯ ಮಾಡಿದ ಎಲ್ಲರಿಗೂ ನಮ್ಮ ಹೃತ್ಪೂರ್ವಕ ಧನ್ಯವಾದಗಳು . ನಿಮ್ಮೆಲ್ಲರ ಮೇಲೆ ಆ ಮಕ್ಕಳ ಮತ್ತು ಅವರ ಪೋಷಕರ ಶುಭ ಹಾರೈಕೆ ಇರುತ್ತದೆ.

ಮತ್ತೊಂದು ಮುಖ್ಯ ಸಂಗತಿ - ದೀಪಾವಳಿ ಕಾರ್ಯಕ್ರಮದಲ್ಲಿ, ನಿಮ್ಮೆಲ್ಲರಿಗೂ ತಿಳಿದಹಾಗೆ, ಅಕ್ಕ ಸಂಘದ ಸಮಿತಿಯವರು ಬಂದು, ಮುಂದಿನ ವರ್ಷದ ಅಕ್ಕ ಸಮ್ಮೇಳನವನ್ನು ಮಲ್ಲಿಗೆ ಕನ್ನಡ ಸಂಘದ ಸಹಯೋಗದೊಂದಿಗೆ ನಮ್ಮ ಡಲ್ಲಾಸ್ ನಗರದಲ್ಲಿ ನಡೆಸುವ ಘೋಷಣೆ ಮಾಡಿದರು. ಹತ್ತನೇ ಅಕ್ಕ ಸಮ್ಮೇಳನ ನಮ್ಮ ಊರಲ್ಲಿ ನಡೆಯುತ್ತಿರುವುದು ನಮಗೆಲ್ಲ ಒಂದು ಹೆಮ್ಮೆಯ ಮತ್ತು ಸಂತೋಷದ ವಿಷಯ. ಕನ್ನಡ ನಾಡಿನ ಬಾವುಟವನ್ನು ನಮ್ಮ ನಗರದಲ್ಲಿ ಹಾರಿಸುವ ಸದವಕಾಶ ನಮಗೆ ದೊರಕಿದೆ.. ಈ ಸಮ್ಮೇಳನದ ಸಿದ್ಧತೆಗೆ ಮತ್ತು ಯಶಸ್ಸಿಗೆ ನಿಮ್ಮ ಸಹಕಾರ ಅತ್ಯಗತ್ಯ. ಎಲ್ಲರು ಒಂದಾಗಿ ಸೇರಿ, ಬಹಳ ವಿಜೃಂಭಣೆಯಿಂದ, ವಿಶಿಷ್ಟವಾಗಿ, ಅನನ್ಯವಾಗಿ ನಾವು ನಡೆಸೋಣ. ಈ ಸಮ್ಮೇಳನದ ಸಿದ್ಧತೆಗೆ ಕಾರ್ಯಕಾರಿ ಸಮಿತಿಗಳ ನಿರ್ಮಾಣ ಸಂಕ್ರಾಂತಿಯ ನಂತರ ಆರಂಭಿಸಲಾಗುತ್ತದೆ, ನಿಮ್ಮಲ್ಲರಿಗೂ ಅದರ ಬಗ್ಗೆ ಮಾಹಿತಿಯನ್ನು ಕಳಿಸುತ್ತೇವೆ. ದಯವಿಟ್ಟು ಮುಂದೆ ಬಂದು ಭಾಗವಹಿಸಿ, ಪ್ರೋತ್ಸಾಹಿಸಿ, ಯಶಸ್ವಿಗೊಳಿಸಿ!

ಕಡೆಯದಾಗಿ, ಹಾಗು ಬಹಳ ಮುಖ್ಯವಾಗಿ, ನಮ್ಮ ಕನ್ನಡ ಸಂಘ ಒಳ್ಳೆಯ ಕಾರ್ಯಕ್ರಮಗಳನ್ನು ಆಯೋಜಿಸಲಿಕ್ಕೆ ಮೂಲಕಾರಣ ನಮ್ಮ ಪ್ರಾಯೋಜಕರು. ಅವರ ಬೆಂಬಲದಿಂದ ಉನ್ನತ ದರ್ಜೆಯ ಸಭಾಂಗಣಗಳನ್ನು, ಒಳ್ಳೆಯ ಕಲಾವಿದರನ್ನು, ಹೊಸ ರುಚಿ ಊಟದ ವ್ಯವಸ್ಥೆಗಳನ್ನು ಮಾಡುವುದು ಸಾಧ್ಯವಾಗಿದೆ.  ನಮ್ಮ ಮಹೋನ್ನತ ಪ್ರಾಯೋಜಕರಾದ "ಟ್ಯೂರ್ಮೆರಿಕ್" ಕೇಟರಿಂಗ್ ನ ವಿಕ್ಟರ್ ವರಗೀಸ್, "ಮೈ ಟ್ಯಾಕ್ಸ್ ಫೈಲರ್"ನ ಸುಧೀರ್ ಪೈ ಹಾಗು ನಮ್ಮ ಕಾರ್ಯಕ್ರಮಗಳಲ್ಲಿ ಧನಸಹಾಯ ಮಾಡುವ ಎಲ್ಲಾ ಪ್ರಾಯೋಜಕರಿಗೂ ನಮ್ಮ ಮಲ್ಲಿಗೆ ಕನ್ನಡ ಸಂಘದ ಸಮಿತಿಯ ಪರವಾಗಿ ಧನ್ಯವಾದಗಳು.

ಇಲ್ಲಿಯವರಗೆ ನೀವೆಲ್ಲರೂ ಮಲ್ಲಿಗೆ ಕನ್ನಡ ಸಂಘಕ್ಕೆ ತೋರಿಸಿರುವ ಬೆಂಬಲ ಮತ್ತು ಪ್ರೋತ್ಸಾಹಕ್ಕೆ ನಮ್ಮ ಕಾರ್ಯಕಾರಿ ಸಮಿತಿಯ ಪರವಾಗಿ ನನ್ನ ಅನಂತ ಕೋಟಿ ಧನ್ಯವಾದಗಳು. ಮುಂದೆ ಬರುವ ವರ್ಷದಲ್ಲಿ ನಿಮ್ಮ ಬೆಂಬಲ ಮತ್ತು ಪ್ರೋತ್ಸಾಹ ಹೀಗೆಯೇ ಮುಂದುವರೆಯಲಿ, ನಿಮ್ಮ ಸೇವೆ ಮಾಡುವ ಅವಕಾಶ ಹೀಗೆ ಇರಲಿ ಎಂದು ಆಶಿಸುವ, ಬಯಸುವ ನಿಮ್ಮ ವಿಶ್ವಾಸಿ

**ವತ್ಸ ರಾಮನಾಥನ್**

# ದೀಪಾವಳಿ ವರದಿ



ರೇಖಾ ಪ್ರಕಾಶ್

"ಸಂಭ್ರಮ ಸಡಗರದಿಂದ ತುಂಬಿ ತುಳುಕಿದ ಕನ್ನಡದ ಕಂಪನ್ನು ಪಸರಿಸಿ ಆಚರಿಸಿದ ಕನ್ನಡ ರಾಜ್ಯೋತ್ಸವ

ಮತ್ತು

ದೀಪಗಳ ಜ್ಯೋತಿಯನ್ನು ಬೆಳಗಿ, ಜ್ಞಾನದ ಬೆಳಕಿನೆಡೆ ನಡೆದು ಆಚರಿಸಿದ ದೀಪಾವಳಿ ಹಬ್ಬ".

ಸಂಭ್ರಮದ ದೀಪಾವಳಿ ಹಬ್ಬದ ದೀಪಗಳ ಜ್ಯೋತಿಯು ಮತ್ತೊಮ್ಮೆ ನಮ್ಮ ಮಲ್ಲಿಗೆ ಕನ್ನಡ ಸಂಘದಲ್ಲಿ ಬೆಳಗಿತು. ಈ ಬಾರಿಯ ದೀಪಾವಳಿ ಹಬ್ಬದ ಆಚರಣೆ " ದಿ ಐಸ್ಮನ್ ಸೆಂಟರ್ ಆಫ್ ಆರ್ಟ್ಸ್ " ನಲ್ಲಿ ವಿಜೃಂಭಣೆಯಿಂದ ನಡೆಯಿತು.

" ತೋರಣದ  ತಳಿರಲ್ಲಿ, ಹೊಸಿಲ ಹಣತೆಗಳಲಿ
ಬಾಣ ಬಿರುಸುಗಳಲ್ಲಿ ನಲಿವು ಮೂಡಿ ..
ಕತ್ತಲೆಯ ಪುಟಗಳಲಿ ಬೆಳಕಿನ ಅಕ್ಷರಗಳಲಿ
ದೀಪಗಳ ಸಂದೇಶ ಥಳಥಳಿಸಲಿ....
ಬೆಳಕಿನ ಅಸ್ತಿತ್ವವನೆ ಅಣಕಿಸುವ ಕತ್ತಲೆಗೆ
ತಕ್ಕ ಉತ್ತರವಿಲ್ಲಿ ಕೇಳಿ ಬರಲಿ"

"ದೀಪಾವಳಿಯ ಜ್ಯೋತಿ ಅಭಯ ಹಸ್ತವನೆತ್ತಿ ಎಲ್ಲರಿಗೂ ಎಲ್ಲಕ್ಕೂ  ಶುಭಕೋರಲಿ"

ಅಂಧಕಾರವ ತೊಲಗಿಸಿ ಜ್ಞಾನದ ದೀವಿಗೆಯ ಹಚ್ಚಿ ಬೆಳಕಿನೆಡೆಗೆ ದಾರಿ ತೋರುವ ನಮ್ಮ ದೀಪಾವಳಿಯ ಹಬ್ಬವನ್ನು ಮತ್ತು ಕನ್ನಡದ ಧ್ವಜಕ್ಕೆ ಗೌರವವನ್ನುತೋರಿ, ಕನ್ನಡದ ನಡೆ ನುಡಿಯನ್ನು ಎತ್ತಿ ತೋರಿ, ಕನ್ನಡದ ಪ್ರೇಮವನು ಸವಿದು , ಸಂಭ್ರಮದಿಂದ ಕನ್ನಡ ರಾಜ್ಯೋತ್ಸವ ಮತ್ತು ದೀಪಾವಳಿ ಆಚರಿಸಿದ ನಮ್ಮ ಮಲ್ಲಿಗೆ ಕನ್ನಡ ಸಂಘಕ್ಕೆ ನನ್ನ ಹೃತ್ಪೂರ್ವಕ ಶುಭಾಶಯಗಳು.  " ಬೆಳಗು ಬಾ ಹಣತೆಯನು, ಬೆಳಗು ಬಾ ಜ್ಯೋತಿಯನು ಎದೆಯ ಮಂದಿರದಲ್ಲಿ, ಜಗಕೆ ಬೆಳಕಾಗುವೀ ಶುಭ ಘಳಿಗೆಯಲ್ಲಿ, ದಿವ್ಯ ದೀಪಾವಳಿಯ ಶುಭ ಲಗ್ನದಲ್ಲಿ"  ಅನ್ನುವ ಕವಿಯೋಕ್ತಿಯಂತೆ ಎಲ್ಲರೂ  ಸಾಲಂಕೃತ ಅಲಂಕಾರದಿಂದ ಸಿಂಗರಿಸಿಕೊಂಡು, ಹೆಜ್ಜೆ ಹೆಜ್ಜೆಗೆ ಸಾಲು ಸಾಲು ದೀಪ ಬೆಳಗಿ , ಜ್ಞಾನದಬೆಳಕು ನೀಡಲೆಂದು ಬೇಡಿ, ಸಂತೋಷದಿಂದ ಆಚರಿಸಿದ ಈ ಹಬ್ಬವು ಎಲ್ಲರ ಮನಸಿನಲ್ಲಿ ಉತ್ಸಾಹದ ಚಿಲುಮೆಯನ್ನು ಎಬ್ಬಿಸಿತೆಂದರೆ ಆಶ್ಚರ್ಯವಿಲ್ಲ .





ಈ ಬಾರಿಯ ಹಬ್ಬದ ವಿಶೇಷತೆ ಏನೆಂದರೆ ಈ ಕಾರ್ಯಕ್ರಮವು ಉತ್ತರ ಕರ್ನಾಟಕದ ಸೊಬಗನ್ನು ಎತ್ತಿಹಿಡಿದಿತ್ತು. ಹಬ್ಬದ ಆರಂಭವನ್ನು ನಮ್ಮ ಧಾರವಾಡದ ಬೆಡಗಿ ಅನುಬೆನಕಟ್ಟಿಯವರು ಉತ್ತರ ಕರ್ನಾಟಕದ ಮಾತಿನ ಶೈಲಿಯಲ್ಲೇ ಮಾತನಾಡಿ ಎಲ್ಲರನ್ನು ಸ್ವಾಗತಿಸಿದರು. ಅದರ ಸೊಬಗು ಜೇನು ಸಕ್ಕರೆ ಬೆರೆತಂತೆ ಮಧುರವಾಗಿತ್ತು. ಕುಂದಾ, ಪೇಡಗಳ ಸಿಹಿ ರುಚಿಯನ್ನು ಅವರ ಮಾತಿನಲ್ಲೇ ಬೆರೆಸಿ ಎಲ್ಲರಿಗೂ ಹಂಚಿದಂತಿತ್ತು ಆ ಭಾಷೆಯ ಸೊಬಗು.





ಈ ಬಾರಿ ಕಾರ್ಯಕ್ರಮಕ್ಕೆ ಮುದ್ದು ಮಕ್ಕಳಿಗೆ ಪ್ರಾಧಾನ್ಯ ನೀಡಿ, ಅವರಿಗೆ ಕನ್ನಡ ಭಾಷಾಪ್ರೇಮವನ್ನು ತೋರುವಂತೆ ಮಾಡಿದ್ದು , ಮಲ್ಲಿಗೆಸಂಘದ ಬಗ್ಗೆ ಹೆಮ್ಮೆ ಪಡುವಂತಾಯಿತು." ಎಂದೆಂದಿಗೂ ನೀ ಕನ್ನಡವಾಗಿರು" ಕನ್ನಡ ಗೋವಿನ ಓ ಮುದ್ದಿನ ಕರು,ಕನ್ನಡವೊಂದಿದ್ದರೆ ನೀ ನಮಗೆ ಕಲ್ಪತರು", ಎನ್ನುವಂತೆ ಇತ್ತು. ಪುಟ್ಟ ಪುಟ್ಟ ಹೆಜ್ಜೆಯನಿಟ್ಟು ಮುಂದೆ ಮುಂದೆ ನಡೆಯಲು ಮುದ್ದುಮಕ್ಕಳಿಗೆ ಪ್ರೇರಣೆ ಮಾಡಿದ್ದು ಮನಸಿಗೆ ಮುದ ಕೊಟ್ಟಿತ್ತು. ಪುಟ್ಟು ಪುಟಾಣಿಗಳ ಸುಮಧುರ ಕನ್ನಡದ ಭಾವಗೀತೆಗಳು, ಚಿತ್ರಗೀತೆಗಳು, ಜಾನಪದ ಗೀತೆಗಳು, ದೇಶ ಭಕ್ತಿ ಗೀತೆಗಳು, ಶಾಸ್ತ್ರೀಯ ನೃತ್ಯಗಳು , ಈಗಿನಕಾಲದ ನವೀನ ರೀತಿಯ ನೃತ್ಯಗಳು, ಎಷ್ಟು ಚೆನ್ನಾಗಿ ಮೂಡಿಬಂತೆಂದರೆ , ಸಭಿಕರೆಲ್ಲರೂ ಚಪ್ಪಾಳೆ ತಟ್ಟಿ ಪುಟಾಣಿಗಳನ್ನು ಪ್ರೋತ್ಸಾಹಿಸಿದರು.

ಅತಿ ಸುಂದರವಾಗಿ ವರ್ಣಿಸಿ ನೃತ್ಯ ರೂಪಕವಾಗಿ ತೋರಿಸಿದ ಪಂಚಭೂತಗಳ ಪರಿಚಯ, ಹವನ ಮಾಡಿ ಅಗ್ನಿದೇವನನ್ನು ಕರೆದ ರೀತಿ, ಮುಂದಿನ ಪೀಳಿಗೆಗೆ ನಮ್ಮ ಸಂಸ್ಕೃತಿಯನ್ನು ಧಾರೆ ಎರೆದಂತಿತ್ತು. ಮುದ್ದಿನ ಮಕ್ಕಳಿಗೆ ಸುಗಮ ಸಂಗೀತ " ಎಲೆ ಗಳು ನೂರಾರು ಭಾವದ ಎಳೆಗಳು ನೂರಾರು" ಎಂಬ ಅರ್ಥ ಪೂರ್ಣ,ದೀರ್ಘ ಗೀತೆಯನ್ನು ಬಾಯಿಪಾಠ ಮಾಡಿಸಿ ಶ್ರುತಿ, ತಾಳ ಬದ್ಧವಾಗಿ ಹಾಡಿಸಿದ್ದಲ್ಲದೆ, ಮಕ್ಕಳಿಗೆ ಕವನದ ಬಗ್ಗೆ ಅಭಿಮಾನ ಮೂಡಿಸಿದ್ದು , ಸಭಿಕರೆಲ್ಲರಿಗೂ ಖುಷಿಕೊಟ್ಟ ವಿಷಯ. ದೇಶಭಕ್ತಿ ಗೀತೆ " ಜೈ ಭಾರತ ಜನನಿಯ ತನುಜಾತೇ " ಹಾಡಿನಲ್ಲಿ ಸಂಸ್ಕೃತಿಯನ್ನು ಎತ್ತಿ ತೋರಿಸುವ ಡೋಲು ಕುಣಿತ, ಕಂಸಾಳೆ ಪದ,ಯಕ್ಷಗಾನ , ಎಲ್ಲ ರೀತಿಯ ನೃತ್ಯಗಳ ಸೊಬಗನ್ನು ಸೇರಿಸಿ , ಸಂಗೀತ ಮತ್ತು ನೃತ್ಯ ಸಮ್ಮಿಶ್ರಣ ಮಾಡಿ, ಅದರ ಸವಿಯನ್ನು ಒಟ್ಟೊಟ್ಟಿಗೆ ಸಭಿಕರಿಗೆ ರಸದೌತಣ ಮಾಡಿಸಿದ್ದಲ್ಲದೆ , ಪುಟ್ಟ ಮಕ್ಕಳಿಗೆ ಭಾರತ ದೇಶದ ಬಗ್ಗೆ ಒಲವು ಮೂಡಿಸಿದ್ದು, ಅತ್ಯದ್ಭುತ ಪ್ರಯತ್ನ. ಕನ್ನಡದ ಹಳೆಯ ಸುಮಧುರ ಚಿತ್ರ ಗೀತೆಗಳನ್ನೊಳಗೊಂಡ ಮಕ್ಕಳ ಮತ್ತು ಅಮ್ಮಂದಿರ ನೃತ್ಯರೂಪಕ , ಸುಂದರ ರಸ ಸಂಜೆಗೆ ಹಲವಾರು ರಂಗು ಕೊಟ್ಟು ಸುಂದರತೆಯನ್ನು ಹೆಚ್ಚಿಸಿ ಎಲ್ಲರ ಮನಸೆಳೆಯಿತು. ಹಲವಾರು ನೃತ್ಯ, ಸಂಗೀತ, ನಾಟಕಗಳು ಹಬ್ಬಕ್ಕೆ ರಂಗೇರಿಸಿ, ಮನಕ್ಕೆ ಮುದವೇ ರಿಸಿ, ರಾಜ್ಯೋತ್ಸವಕ್ಕೆ ಹೊಸ ರೂಪವನ್ನೇ ಕೊಟ್ಟು, ಮಲ್ಲಿಗೆ ಕನ್ನಡಸಂಘದ ಹೆಮ್ಮೆಯನ್ನುಹೆಚ್ಚಿಸಿತು.

ನಮ್ಮ ಕರ್ನಾಟಕದ ಹೆಮ್ಮೆಯ ಗಾಯಕರಾದ ಶ್ರೀ. ಗಣೇಶ್ ದೇಸಾಯಿಯವರ ಸುಗಮ ಸಂಗೀತ , ರಸಸಂಜೆಗೆ ಇಂಪು ತುಂಬಿಸಿ ಕಾಮನಬಿಲ್ಲಿನ ರಂಗಿನ ಬೆಡಗು ಮೂಡಿಸಿತು. ಅವರ ಸುಮಧುರ ಕಂಠದಿಂದ ಹೊರ ಹೊಮ್ಮಿದ " ಹರಿ ಕುಣಿದಾ ನಮ್ಮ ಹರಿ ಕುಣಿದಾ" ಎಲ್ಲರನ್ನೂ ಸಂಗೀತದ ಅಲೆಯಲ್ಲಿ ಕುಣಿಸಿತು.ಅವರು ಬರೀ ಸಂಗೀತವಲ್ಲದೆ ಸಾಹಿತ್ಯವನ್ನು ವರ್ಣಿಸಿ, ಎಲ್ಲರಿಗೂಅರ್ಥಮಾಡಿಸಿ , ಹಾಡು ಹೇಳುವ ರೀತಿ ಅತ್ಯದ್ಭುತ ..... "ಕೋಡಗನ ಕೋಳಿ ನುಂಗಿತ್ತ ತಂಗೀ" ಹಾಡಿಗೆ ಎಲ್ಲರೂ ಆನಂದಗೊಂಡು , ಅವರ ಜೊತೆಗೂಡಿ ತಾಳ ಹಾಕಿ ನಲಿದು ನಾಟ್ಯವಾಡಿದ್ದು , ಅವರ ಕಂಠ ಸಿರಿಯನ್ನು ಅನುಭವಿಸಿದ್ದಕ್ಕೆ ಸಾಕ್ಷಿಯಾಗಿತ್ತು. ಶ್ರೀ ದೇಸಾಯಿಯವರಿಗೆ ನಮ್ಮೆಲ್ಲರ ಹೃದಯ ಪೂರ್ವಕ ಅಭಿನಂದನೆಗಳು.

ದೀಪಾವಳಿಯ ಉತ್ತರ ಕರ್ನಾಟಕದ ವಿಶೇಷ ಊಟವಂತೂ ಎಲ್ಲರಿಗೂ ರಸ ದೌತಣವಾಗಿತ್ತು. ಅಂತೂ ಕಣ್ಣಿಗೆ ಹಬ್ಬ, ಕಿವಿಗೆ ಇಂಪು, ಸೊಗಸಾದ ಭೋಜನ, ಎಲ್ಲವು ಸೇರಿ , ನಮ್ಮ ಕನ್ನಡಿಗರಿಗೆ ಮರೆಯದ ದೀಪಾವಳಿ ಆಯಿತು. ಗೆಳೆಯರೇ , ಗೆಳತಿಯರೆ , ಮುಂದಿನ ಹಬ್ಬ ಆಚರಿಸುವವರೆಗೂ ಕಾಯೋಣವೇ?

" ಜೈ ಕರ್ನಾಟಕ, ಜೈ ಮಲ್ಲಿಗೆ ಕನ್ನಡ ಸಂಘ"

# ಕಾವೇರಿ ಮಾತೆ - ಒಂದು ಪದ್ಯ-ಗದ್ಯ

ಕೆ. ಎಲ್. ಸುಬ್ಬಲಕ್ಷ್ಮಮ್ಮ

ಹೇ ಕಾವೇರಿ ಮಾತೆ, ನಿನ್ನ ಹುಟ್ಟು ಹಬ್ಬದ
ಸಂಭ್ರಮವ ಏನೆಂದು ವರ್ಣಿಸಲಿ ??
ಭಾಗಮಂಡಲದ ಪೂಜೆ ಪುನಸ್ಕಾರಗಳನ್ನು ವರ್ಣಿಸಲು ಅಸಾಧ್ಯ!
ಸಾವಿರಾರು ಭಕ್ತರು ನಿನ್ನ ಉದ್ಭವವನ್ನು ಎವೆಯಿಕ್ಕದೆ ನೋಡುತಿಹರು.

ಬ್ರಹ್ಮಕುಂಡಿಕೆಯಲ್ಲಿ ಜನಿಸಿದವಳೆ
ಪಾಲ್ಗಡಲಲ್ಲಿ ಮಿಂದವಳೆ ಹೇ ಕಾವೇರಿ ಮಾತೆ!
ತೀರ್ಥೋದ್ಭವ ಆಗುತ್ತಿದ್ದ ಹಾಗೆ ಅದೇನು ಹರ್ಷೋದ್ಗಾರಾ!
ಅದೇನು ಮುಗಿಲು ಮುಟ್ಟುವ ಕರತಾಡನ!
ನಿನ್ನ ಪುಣ್ಯತೀರ್ಥದಲ್ಲಿ ಮಿಂದು ಸುಖಿಸಿದವರು ಅದೆಷ್ಟು ಜನ!

ಹೇ ಕಾವೇರಿ ಮಾತೆ, ಎಲ್ಲ ಸಂಭ್ರಮವು ಮುಗಿದಿದ್ದರೆ, ಇನ್ನಾದರೂ ಇತ್ತ ಹರಿದು ಬಾ,
ನಲಿಯುತ್ತ ಬಾ, ಕುಣಿಯುತ್ತ ಬಾ, ಒಮ್ಮೆ ಧುಮ್ಮುಕ್ಕಿ ಬಾ
ಇಕ್ಕೆಲಗಳನು ತಣಿಸಿ ಬಾ
ಕೋಟಿಕೋಟಿ ಜನರ ತೃಷೆಯನು ನೀಗಲು ಬಾ
ಪಟ್ಟಣವ ಸುತ್ತಿ ಬಾ, ರಂಗನನು ದಿಟ್ಟಿಸಿ ಬಾ
ಸಂಗಮದಿ ನಿನ್ನ ಗೆಳತಿಯರನು ಕೂಡಿ ಬಾ
ಸಹಸ್ರಾರು ಜನರು ನಿನ್ನ ಪುಣ್ಯಸ್ನಾನಕ್ಕಾಗಿ ಕಾಯುತಿಹರು
ಅವರ ಪಾಪಗಳನ್ನು ನೀಗಲು ಬಾ
ಭಾಮಿನಿಮಣಿಯರು ಬಾಗಿನವ ಪಿಡಿದು ಬಾಗಿಬಾಗಿ ನೋಡುತಿಹರು
ಅವರನ್ನು ಹರಸಲು ಬಾ
ಮುಂದೆ ಕನ್ನಂಬಾಡಿಯಲ್ಲಿ ನಿನ್ನ ಬಂಧಿಸುವರು ಎಂಬ ಶಂಕೆ ಬೇಡ ತಾಯಿ
ಅದೊಂದು ರಕ್ಷಾಬಂಧನ, ಅದೊಂದು ಪ್ರೀತಿಯ ಪ್ರತೀಕ
ನಿನ್ನ ಬರುವಿಗಾಗಿ ನಂದನವನವೇ ಸೃಷ್ಟಿಯಾಗಿದೆ ತಾಯಿ
ಅದಕೆ ಜೀವಕಳೆ ತುಂಬಲು ಬಾ
ಏನು ಮಸ್ತಿ, ಏನು ಮೋಜು!
ಮೈ ನವಿರೇಳುವ ವಾತಾವರಣ!
ಹೇ ದೇವಿ, ಭಾವ ಪರವಶಳಾಗಿ ಅಲ್ಲಿಯೇ ನಿಲ್ಲದಿರು
ಮಾಂಡವ್ಯ ನಗರದ ವಕ್ಕಲು ಮಕ್ಕಳು ನಿನ್ನ ಬರುವಿಗಾಗಿ ಪರಿತಪಿಸುತಿಹರು
ನಾಡಿಗೆ ಸಿಹಿ ನೀಡುವ ಹುನ್ನಾರ ಅವರದು
ಅವರ ಮೊಗದಲಿ ಮಂದಹಾಸ ಮೂಡಲು ನಾಲೆಯಾಗಿ ಹರಿದು ಬಾ
ಗಂಡುಗಲಿಗಳ ನಾಡಿಗೆ
ಕವಿಪುಂಗವರು ಮೆರೆದ ಬೀದಿಗೆ
ಕಾಮಿನಿಯರ ಸಿರಿ ಅಂಗಳಕ್ಕೆ
ಸಂಭ್ರಮದಿ ಬಾ ತಾಯಿ

ಇದೋ ತಾಯೆ, ನಿನಗೆ ಕೋಟಿ ಕೋಟಿ ನಮನ
ಏನೆಂದು ಹೆಸರಿಸಲಿ ನಿನ್ನ?
ಪಾಪನಾಶಿನಿಯೆನ್ನಲೆ? ಪುಣ್ಯಶ್ರೀ ಎನ್ನಲೆ, ಪಾವನಿ ಎನ್ನಲೆ, ಭಾಗೀರಥಿ ಎನ್ನಲೆ
ಹೇ ಸಿರಿಗೌರಿ ಲಕ್ಷ್ಮೀ ಹತ್ತಿರ ಬಾ

ನಾಲ್ವಡಿ ಕೃಷ್ಣರ ಪೀಳಿಗೆಯ ಹರಸುತ್ತ ಬಾ
ವಿಶ್ವೇಶ್ವರಯ್ಯನವರನ್ನು ಸ್ಮರಿಸುತ್ತ ಬಾ
ಹೇ ಕಾವೇರಿ ಮಾತೆ, ಕರುನಾಡ ಜೀವನದಿಯಾಗಿ ಬಾ!

# ಲಾಲ್ ಬಾಗ್ ನ ಗರ್ಭ ಗುಡಿ

ನವ್ಯ ಎಸ್.




ರಾಷ್ಟ್ರಕವಿ ಕುವೆಂಪು ಅವರು ಲಾಲ್ ಬಾಗ್ ನ್ನು "ದೇವಾಲಯವೀ ಹೂವಿನ ತೋಟಂ" ಎಂದು ಕರೆದಿದ್ದಾರೆ . ಈ ದೇವಾಲಯದ ಗರ್ಭ ಗುಡಿಯೇ ಗಾಜಿನ ಮನೆ ಅಥವಾ ಗ್ಲಾಸ್ ಹೌಸ್ . ಹೇಗೆ ವಾರ್ಷಿಕ ಉತ್ಸವಗಳಲ್ಲಿ ಗರ್ಭಗುಡಿಯನ್ನು ವಿಶೇಷವಾಗಿ ಅಲಂಕರಿಸುತ್ತಾರೋ ಹಾಗೆ ಇದೂ ಪುಷ್ಪೋತ್ಸವದಲ್ಲಿ ವರ್ಣರಂಜಿತವಾಗಿ ವಿಭಿನ್ನ ಶೋಭೆಯನ್ನೇ ಪಡೆದುಬಿಡುತ್ತದೆ . ಇನ್ನು ಈ ಬಾರಿಯ ಹೂವಿನ ದೋಣಿಯಂತೆ ಪ್ರತಿ ವರ್ಷವೂ ಬಹುತೇಕ ಗುಲಾಬಿ ಹೂಗಳಿಂದಲೇ ರೂಪಿಸಲ್ಪಡುವ ರಚನೆಗಳಂತೂ ಗುಡಿಯೊಳಗಿನ ಮೂರ್ತಿಯಂತೆ ಕಂಗೊಳಿಸುತ್ತದೆ ..

ಈ ಗಾಜಿನ ಮನೆಯ ರಚನೆಯಾಗುವುದಕ್ಕೆ ಎರಡು ದಶಕಗಳ ಮುಂಚೆಯೇ , ಇದರ ಎದುರಿಗೆ ಇರುವ ಬ್ಯಾಂಡ್ ಸ್ಟ್ಯಾಂಡ್ ನಲ್ಲಿ 1867ರ ಫೆಬ್ರುವರಿ 16 ರಂದು ಪ್ರಥಮ ಪುಷ್ಪ ಪ್ರದರ್ಶನವು ನಡೆಯಿತು . ಅದೇ ವರ್ಷ ಡಿಸೆಂಬರ 31 ರಂದು ಎರಡನೇ ಪ್ರದರ್ಶನವೂ ,1868ರ ಸೆಪ್ಟೆಂಬರ ,1869 ರ ಫೆಬ್ರುವರಿಯಲ್ಲಿ ಮೂರು ಮತ್ತು ನಾಲ್ಕನೇ ಪ್ರದರ್ಶನಗಳೂ ಆಯೋಜಿತಗೊಂಡವು . 1870ರ  ಪ್ರದರ್ಶನದಲ್ಲಿ ಮೈಸೂರು ಸಂಸ್ಥಾನದ್ದೇ ಆದ ದನಕರುಗಳು , ಕುರಿಗಳು , ಕುದುರೆಗಳು ದವಸ ಧಾನ್ಯಗಳೂ ಇದ್ದವು . ಮುಂದಿನ ವರ್ಷಗಳಲ್ಲಿ ಮಳೆಯಿಂದಾಗಿ ಟೆಂಟ್ ಗಳ ವ್ಯವಸ್ಥೆ ಮಾಡಲಾಯಿತು . ಇದರ ಶಾಶ್ವತ ವ್ಯವಸ್ಥೆಗಾಗಿ 1890 ರಲ್ಲಿ ಇಲ್ಲಿನ ಮುಖ್ಯಸ್ಥರಾಗಿದ್ದ ಜಾನ್ ಕೆಮರಾನ್ ರವರ ಆದೇಶದಂತೆ ಲಂಡನ್ ನ ಕ್ರಿಸ್ಟಲ್ ಪ್ಯಾಲೇಸ್ ಮಾದರಿಯಲ್ಲಿ ಇಂಗ್ಲೆಂಡಿನ ಮೆಕ್ ಫರ್ಲಾನ್ ಕಂಪನಿ, ಗ್ಲ್ಯಾಸ್ಕೋ , ಇವರು ಈ ಗಾಜಿನ ಮನೆಯನ್ನು ನಿರ್ಮಿಸಿದರು . ಇಂದಿಗೂ ಮುಖ್ಯ ಪ್ರವೇಶ ದ್ವಾರದ ಗೇಟುಗಳು ಮತ್ತು ಇಲ್ಲಿನ ಕಂಬಗಳ ಮೇಲೇ ಈ ಹೆಸರಿರುವುದನ್ನು ಕಾಣಬಹುದು . ಮೊದಲು ಇದನ್ನು ಆಲ್ಬರ್ಟ್ ವಿಕ್ಟರ ಕನ್ಸರ್ವೇಟೊರಿ ಎಂದು ಕರೆದರೂ ನಂತರ ಗ್ಲಾಸ್ ಹೌಸ್ ಎಂದೇ ಪ್ರಸಿದ್ಧವಾಯಿತು . 1935 ರಲ್ಲಿ ರಾವ್ ಬಹಾದ್ದೂರ್ ಹೆಚ್. ಸಿ. ಜವರಾಯ ಅವರು ಮುಖ್ಯಸ್ಥರಾಗಿದ್ದಾಗ ಇದರ ಪೂರ್ವಕ್ಕೆ ಇನ್ನೊಂದು ಭಾಗವನ್ನು ಸೇರಿಸಿದರು . ಮೂಲ ರಚನೆಗೆ ಎಲ್ಲ ರೀತಿಯಲ್ಲೂ ಸರಿಹೊಂದುತ್ತಿದ್ದ ಇದರ ನಿರ್ಮಾಣದಲ್ಲಿ ಸಂಪೂರ್ಣವಾಗಿ ಭದ್ರಾವತಿಯ ಮೈಸೂರು ಐರನ್ ವರ್ಕ್ಸ್ ಕಾರ್ಖಾನೆಯಲ್ಲಿ ತಯಾರಾದ ವಸ್ತುಗಳನ್ನೇ ಬಳಸಲಾಯಿತು .





1891 ರಲ್ಲಿ ಗಾಜಿನ ಮನೆಯಲ್ಲೇ ಪ್ರಥಮ ಪುಷ್ಪ ಪ್ರದರ್ಶನವನ್ನು ಏರ್ಪಡಿಸಲಾಯಿತು . ಆದರೆ ಮುಂದೆ ಬರಗಾಲ ಮತ್ತು ಪ್ಲೇಗ್ ನಿಂದಾಗಿ  ಕ್ರಮವಾಗಿ ಪ್ರದರ್ಶನಗಳು ನಡೆಯಲಿಲ್ಲ .1906 ರಲ್ಲಿ ವೇಲ್ಸ್ ನ ರಾಜಕುಮಾರ ಬೆಂಗಳೂರಿಗೆ ಬಂದಾಗ ಅವರ ಗೌರವಾರ್ಥ ನಡೆದು ಮತ್ತೆ ಈ ಪ್ರದರ್ಶನಗಳು ವ್ಯವಸ್ಥಿತವಾದವು .1912 ರಲ್ಲಿ ಜಿ.ಹೆಚ್.  ಕ್ರಂಬಿಗಲ್ ರವರು ಮುಖ್ಯಸ್ತರಾಗಿದ್ದಾಗ ನಡೆದ ಪ್ರದರ್ಶನದಲ್ಲಿ ಬಾಲಕಿಯರಿಗಾಗಿ ಹೂಗಳಿಂದ ಅಲಂಕೃತವಾದ ಬೈಸಿಕಲ್ ಪರೇಡನ್ನು ಏರ್ಪಡಿಸಿದ್ದರು . ಅವರ 12 ವರ್ಷದ ಪುತ್ರಿ ಹಿಲ್ಡಾ ಕೂಡ ಇದರಲ್ಲಿ ಪಾಲ್ಗೊಂಡಿದ್ದಳು ಈ ಗಾಜಿನ ಮನೆಗೆ ನೂರು ವರ್ಷಗಳು ತುಂಬಿದಾಗ ಅದರ ನೆನಪಾಗಿ ಮೈಸೂರು ಹಾರ್ಟಿಕಲ್ಚುರಲ್ ಸೊಸೈಟಿಯು ಗ್ಲಾಸ್ ಹೌಸ್ - ದಿ ಜ್ಯುವೆಲ್ ಆ ಲಾಲ್ ಬಾಗ್ ಎಂಬ ಒಂದು ಗ್ರಂಥವನ್ನು ಪ್ರಕಟಿಸಿತು . ಇದು ಸುಂದರ ಮತ್ತು ಪವಿತ್ರ ಗರ್ಭ ಗುಡಿಗೆ ಸಲ್ಲಿಸಿದ ಸೂಕ್ತ ಗೌರವವಷ್ಟೇ ಅಲ್ಲದೆ ಉಪಯುಕ್ತ ಚಿತ್ರ ಮತ್ತು ಲೇಖನಗಳನ್ನು ಉಳ್ಳ ದಾಖಲೆಯೂ ಹೌದು .

# ಹೀಗೊಂದು ಸಂಕ್ರಾಂತಿ

ಸಂಧ್ಯಾ ಹೊನ್ನವಳ್ಳಿ

ಸಂಕ್ರಾಂತಿ ಸುಗ್ಗಿ ಹಬ್ಬ. ರೈತರ ಮನೆಗಳಲ್ಲಿ ಸಡಗರ ಸಂಭ್ರಮ ತರುವ ಹಬ್ಬ. ಎಳ್ಳು ಬೆಲ್ಲ ತಿಂದು, ಒಳ್ಳೆ ಮಾತಾಡು ಅಂತ ಹೇಳುತ್ತಾ ನಮ್ಮ ತಮ್ಮವರೊಂದಿಗೆ ಎಳ್ಳು ಹಂಚಿಕೊಂಡು ತಿನ್ನುತ್ತಾ ಸಂತೋಷಿಸುವ ಹಬ್ಬ. ಪ್ರತ್ಯಕ್ಷ ಸೂರ್ಯ ಭಗವಾನನೇ ರಾಶಿಗತಿಯನ್ನು ಬದಲಿಸಿ, ಶಿಶಿರವನ್ನು ಹಿಂದಕ್ಕೆ ಹಾಕುತ್ತಾ, ಚೈತ್ರದ ಕಡೆಗೆ ಹಾತೊರೆದು ಸಾಗುವ ಹಬ್ಬ.

ಇಂಥಾ ಈ ಹಬ್ಬ ಒಂದ್ಸಲ ವೀಕ್ ಡೇ ಬಂದುಬಿಡ್ತು ನೋಡಿ....

ಬೆಳಗಿನಜಾವ ಇನ್ನೂ  ನಿದ್ದೆಯಿಂದ ಕಣ್ಣ್ ತೆರೆಯೋದಕ್ಕಿಲ್ಲ, “ಗುಡ್ ಮಾರ್ನಿಂಗ್”, “ಶುಭ ಬೆಳಿಗ್ಗೆ”, “ಹ್ಯಾಪಿ ಸಂಕ್ರಾಂತಿ”, “ಮಕರ ಸಂಕ್ರಾಂತಿಯ ಶುಭಾಶಯಗಳು” ಅಂತ ಎಳ್ಳು, ಬೆಲ್ಲ, ಕಬ್ಬು, ಸಕ್ಕ್ರೆ ಅಚ್ಚಿನ ಸಮೇತದ ಫೋಟೋಗಳು, ಮೆಸೇಜ್ಗಳು! ಎಲ್ಲಿ ಅಂತೀರಾ? ಇನ್ನೆಲ್ಲಿ? ಕರಾಗ್ರೇ ವಸತೇ ವಾಟ್ಸ್ಯಾಪ್ಪ್, ಕರ ಮಧ್ಯೆ ಫೇಸ್ಬುಕ್ಕಹ , ಕರ ಮೂಲೇ ತು ಈಮೈಲಹ, ಪ್ರಭಾತೇ ಐಫೋನ್ ದರ್ಶನಂ ಅಂತಾನೆ ಎದ್ದೇಳೋ ನಮ್ಮ ನಿಮ್ಮೆಲ್ಲರ ಕುಟುಂಬದಲ್ಲಿ ಅತಿ ಮುಖ್ಯವಾದ ಸದಸ್ಯನ ಸ್ಥಾನ ಪಡೆದುಕೊಂಡಿರುವ “ವಾಟ್ಸ್ಯಾಪ್ಪ್”ನಲ್ಲಿ .....  ಕಾಫಿ ಟೀ ಇಲ್ದೇ ಇದ್ದರೂ ಬೆಳಗಾಗುತ್ತ್ಯೇ ಹೊರತು ನಮ್ಮ ಐಫೋನ್ ಇಲ್ದೇ  ಮಾತ್ರ ಆಗಲ್ಲ. ನಿಜ ತಾನೇ?

ಭಾರತ ದೇಶ ಬಿಟ್ಟು ಇಲ್ಲಿ ಬಂದು ನೆಲೆಸಿರೋ ನಮಗೆ ನಮ್ಮ ಯಾವುದೇ ಹಬ್ಬಗಳಿಗೂ ನಿಗದಿತ ರಜಾ ಅಂತೂ ಖಂಡಿತ ಇರುವುದಿಲ್ಲ. ಏನೋ ಒಂದೆರಡು ಹಬ್ಬಗಳು ಅಕಸ್ಮಾತ್ತಾಗಿ ವೀಕೆಂಡ್ ಬಂತು ಅಂದ್ರೆ ನಮ್ಮ ಪುಣ್ಯ. ಹಾಗಾದ್ರೆ, ಈ ದೇಶದಲ್ಲಿ ವೀಕ್ ಡೇ ಬರೋ ಹಬ್ಬಗಳನ್ನ ನಾವು ಹೇಗೆ ಆಚರಿಸುತ್ತೀವಿ ಅನ್ನೋ ಪ್ರಶ್ನೆ. ಎಲ್ಲರೂ ಸ್ಕೂಲು, ಕಾಲೇಜು, ಆಫೀಸು ಅಂತ ಓಡಲೇ ಬೇಕಲ್ಲ.... ಹಬ್ಬ ಅಂತ ಆಫೀಸಿಗೆ ಜರತಾರಿ ಸೀರೆ ಉಟ್ಟಕೊಂಡ್ ಹೋಗೋಕ್ಕೆ ಆಗುತ್ತಾ ಅಥವಾ ಇಲ್ಲಿನ ಬಿಳೀ ಸಹೋದ್ಯೋಗಿಗಳಿಗೆಲ್ಲ ಎಳ್ಳು ಬೀರೋಕ್ಕಾಗುತ್ತಾ? ಶಾಸ್ತ್ರಕ್ಕೆ ಚಕ್ ಚಕ್ ಅಂತ  ಅಮ್ಮನ ಮನೆಗೆ, ಅತ್ತೆ ಮನೆಗೆ ಫೋನ್ ಮಾಡಿ ಹಬ್ಬದ ಶುಭಾಶಯಗಳನ್ನ ಸಲ್ಲಿಸಿದ ಮೇಲೆ, ದೇವರ ಮುಂದೆ ಒಂದು ಹೆಚ್ಚು ಜೊತೆ ದೀಪ, ಒಂದು ಹೆಚ್ಚು ನಿಮಿಷ ಸ್ತೋತ್ರ, ಒಂದು ಹೆಚ್ಚು ನಮಸ್ಕಾರ ಹಾಕಿ, “ಕಾಯಕವೇ ಕೈಲಾಸ” ಅಂತ ಓಡೋದು. ಹಬ್ಬವೇ ಅಲ್ಲ ಅನ್ನೋ ಹಾಗೆ ಸಾಗೊ ಆಫೀಸಿನ ಮಾಮೂಲು ದಿನಚರಿ. ಕತ್ತೆ ಥರಾ ದುಡಿಯೋದು. ಸಾಯಂಕಾಲ ಸುಸ್ತಾಗಿ ಮನೆಗೆ ಬರೋ ಹೊತ್ತಿಗೆ ಕೇಳಿ ಬಂದವು ಕೆಲ ಪ್ರಶ್ನೆಗಳು.... “ಮಾಮ್ ಈಸ್ ಟುಡೇ ಸಂ ಇಂಡಿಯನ್ ಫೆಸ್ಟಿವಲ್?  ಆರ್ ಯು ಸ್ಸಪ್ಪೋಸ್ಡ್ ಟು ಮೇಕ್ ಸಂ ಸ್ಪೆಷಲ್ ಥಿಂಗಿ ಟು ಈಟ್?” ಶಾಲೆಯಲ್ಲಿ ಅರೆ ಬರೆ ನೋಡಿ, ಕೇಳಿದುದರ ಪ್ರಭಾವ!

ಮಕ್ಕಳು ಪಾಪ ತಾವಾಗೇ ಕೇಳ್ತಿದ್ದಾರಲ್ಲ, ಶಾಸ್ತ್ರಕ್ಕಾದರೂ ಸಂಕ್ರಾಂತಿಯ ಆ “ಎಡಿಬಲ್ ಥಿಂಗಿ” ಅಂದ್ರೆ ಎಳ್ಳು ಬೆಲ್ಲ ಮಾಡಿ ಕೊಡೋಣ ಅನ್ನೋಷ್ಟರಲ್ಲಿ  ಮನೆಯ ಕರೆಗಂಟೆಯ ಶಬ್ದ. ನಮ್ಮ ಬೀದಿಯ ಮೂರನೇ ಮನೆಯ ಕನ್ನಡದ ಹುಡುಗಿಯರು. ಅಕ್ಕ ೧೨-೧೩ ವರ್ಷ ಇರಬಹದು. ಕರೀ ಬಣ್ಣದ “ಲೆಗ್ಗಿಂಗ್ಸ್” ಹಾಗು ಮಾಸಲು ಬಣ್ಣದ ಟೀಶರ್ಟ್ ತೊಟ್ಟು, ಸ್ಕೂಲೂ, ಹೋಮ್ ವರ್ಕ್ ಎಲ್ಲದರ ಭಾರದಿಂದ ಸೋತು ಸೊರಗಿದ ಮುಖ, ಕೆದರಿದ ತಲೆ ಹೊತ್ತು, ಕೈಯ್ಯಲ್ಲಿನ ತಟ್ಟೇಲಿ ಕಬ್ಬು, ಎಳ್ಳು ಬೆಲ್ಲ, ಸಕ್ಕ್ರೆ “ಕ್ಯೂಬ್ಸ್” ಇಟ್ಕೊಂಡು ನಿಂತಿದ್ದಳು. ತನ್ನ ಆಂಗ್ಲ “ಆಕ್ಸೆಂಟ್”ನಲ್ಲಿ,   “ಆಂಟಿ ಹಾಯ್. ಆಮ್... ಆಮ್... ಮೈ ಮಾಮ್ ಆಸ್ಕ್ಡ್ ಅಸ್  ಟು ಗೋ ಬೀರ್ ಎಲ್ ಟು ಯು.....ಸೋ...... “ ಅಂತ ತಟ್ಟೆ ಮುಂದೆ ಮಾಡಿದಳು.  ಅಷ್ಟರಲ್ಲೇ ಅವಳ ೪ ವರ್ಷದ ಚೋಟುದ್ದ ತಂಗಿ, ಜರತಾರಿ ಲಂಗ, ರವಿಕೆ, ಬಳೇ, ಗೆಜ್ಜೇ, ಹೊಳೆಯುವ ಬಿಂದಿ ಎಲ್ಲ ತೊಟ್ಟಕೊಂಡು, ಸ್ವಚ್ಛ ಕನ್ನಡದಲ್ಲಿ “ಅಕ್ಕಾ ... ಎಲ್ ಅಲ್ಲ, ಎಳ್ಳು” ಅಂತ ಅಕ್ಕನ ಕನ್ನಡ ತಿದ್ದಿ ನಕ್ಕಳು. ಇನ್ನೂ ಶಾಲೆಯ ಬಿಸಿ ಶಾಖ ತಟ್ಟದ, ಆಂಗ್ಲ ಆಕ್ಸೆಂಟ್ ಇಲ್ಲದ, ಸ್ವಚ್ಛ ಕನ್ನಡ ಮಾಸಿರದ ಮುದ್ದು ಹುಡುಗಿ.

ಅಲೆಲೆಲೆಲೇ ಅಂತ ಆಶ್ಚರ್ಯ ಪಡುತ್ತಾ, ಇಬ್ಬರಿಗೂ "ಥ್ಯಾಂಕ್ಯೂ ಥ್ಯಾಂಕ್ಯೂ, ಸೋ ಸ್ವೀಟ್ ಆಫ್ ಯು" ಅಂತ ಹೇಳ್ತಾ, "ನಾನಿನ್ನೂ ಈಗ ಮನೆಗೆ ಬಂದೆ ಮರೀ, ನಮ್ಮನೆ ಎಳ್ಳು ಇನ್ನು ತಯಾರಾಗಿಲ್ಲ. ಆಮೇಲೆ ಕೊಡ್ತೀನಿ ಅಂತ ಅಮ್ಮನಿಗೆ ಹೇಳಿ" ಅಂತ ಇಬ್ಬರ ಕೈಗಳಿಗೂ "ಕ್ಯಾಂಡಿ" ತುರುಕಿ, ಹಲ್ ಕಿಸಿದು ಕಳಿಸಿದೆ. ಇಷ್ಟು ಬೇಗ ಅದ್ಹೇಗೆ ಎಲ್ಲಾ ಅಣಿ ಮಾಡಿ ಕಳಿಸಿದಳು ಅವಳು ಅಂತ ಗೊಣಗುತ್ತಲೇ ಅಡಿಗೆ ಮನೆ ಕಡೆ ಹೊರಟೆ. ಅಷ್ಟರಲ್ಲಿ



ಗಂಡನ ಧ್ವನಿ... "ನಮ್ಮನೇದಂತೂ ತಯಾರಾಗಿಲ್ಲ, ಅವರ ಮನೆದಾದ್ರು ಕೊಡೇ, "ಬೀರ್ ದ ಎಲ್" ಅಂತ ಕೊಟ್ಟು ಹೋದ್ರಲ್ಲ ಮಕ್ಕಳು. ಭೇಷ್ ಭೇಷ್, ಮೆಚ್ಚಬೇಕ್ಕಾದ್ದೇ...." ಕೋಪ ಬರ್ತಾ ಇರೋ ಹೊತ್ತಿಗೆ ಸರಿಯಾಗಿ ಫೋನ್ ಶಬ್ದ. ಅತ್ತೇ ಮನೇದು .... ಫೋನ್ ತೊಗೊಂಡ ಗಂಡ, "ಹಲೋ ಅಮ್ಮಾ.... " ಅಂತ ಅಮ್ಮನ ಹತ್ರ ತಮ್ಮ ಮನೆಯ ಸಂಕ್ರಾಂತಿ ಹಬ್ಬದ ಕಥೇ ಹೇಳಲು ಶುರು ಮಾಡಿದರು. "ಹೂ ಅಮ್ಮ... ನಿಮಗೂ ಎಲ್ಲರಿಗೂ ಅಷ್ಟೇ, ಹ್ಯಾಪಿ ಸಂಕ್ರಾಂತಿ. ವೀಕ್ ಡೇ ಅಲ್ವಾ? ಬೆಳಿಗ್ಗೆ ಇಂದ ನಂಗೆ ಆಫೀಸಿನಲ್ಲಿ ಸಿಕ್ಕಾಪಟ್ಟೆ ಕೆಲ್ಸಮ್ಮಾ ((ನಂಗಿನ್ನೇನು?)). ಉಸಿರಾಡಕ್ಕೂ ಪುರುಸೊತ್ತಿಲ್ಲ, ಊಟ ಕೂಡಾ ಐದು ನಿಮಿಷದಲ್ಲಿ ನುಂಗಿದೆ ಗೊತ್ತಾ ? ((ನಾನೇನ್ ಮತ್ತೆ ಸರವಣ ಭವನ್ ಗಾ ಹೋಗಿದ್ದೆ?)). ಇನ್ನೂ ಈಗ ತಾನೇ ಮನೇಗ್ ಬರ್ತಾ ಇದ್ದೀನಿ ((ನಂಗೇನ್ ಹಾಫ್ ಡೇ ಇತ್ತಾ ?)) ಎಳ್ಳು ಬೆಲ್ಲ ಊಟ ಏನೂ ರೆಡಿ ಇಲ್ಲಮ್ಮಾ ..." ಅಂತ ಇವರ ಸೋಬೇ ರಾಗ ಮುಂದುವರೆದಿತ್ತು. "ನಿನ್ನ ಕೈಯ್ಯಿನ ಎಳ್ಳು ಬೆಲ್ಲ ನಂಗೆ ಇಲ್ಲಿ ಎಲ್ಲಿ ಸಿಗಬೇಕು ಹೇಳಮ್ಮಾ. ಇವಳಿಗೆ ಯಾವುದಕ್ಕೂ ಟೈಮೇ ಇರೋದಿಲ್ಲ ((ಗಂಡ ಏನಾದ್ರು ಸಹಾಯ ಮಾಡಿದ್ರೆ ತಾನೇ)). ಪುಣ್ಯಕ್ಕೆ ನಮ್ಮ ಬೀದಿಯ ಇನ್ನೊಬ್ಬ ಕನ್ನಡದವಳು ಅದೆಷ್ಟು ಚೆನ್ನಾಗಿ ಮಕ್ಕಳ ಹತ್ರ ಎಳ್ಳು ಬೆಲ್ಲ ತಯಾರು ಮಾಡಿ ಕಳಿಸಿದ್ಲು ಗೊತ್ತಾಮ್ಮಾ , ತುಂಬಾ ರುಚಿಯಾಗಿದೆ ((ಹೌದೌದು... ಬೇರೇ ಮನೇದು ರುಚಿಯಾಗಿಲ್ದೇ ಇರುತ್ತಾ ಮತ್ತೇ )).

ಅಂತೂ ಅಮ್ಮನ ಮುಂದೆ ಮಗನ ಗೋಳು ಕಥೆ ಮುಗಿಯುವಂತೆ ಕಾಣಲಿಲ್ಲ. ಹಸುವಿನಂಥಾ ಮಗನ್ನ ಹುಲಿಯಂಥಾ ಸೊಸೆ ಕೈಲಿ ಕೊಟ್ಟುಬಿಟ್ನಾ? ಹಬ್ಬದ ದಿನ ಪಾಪ ಬೇರೆಯವರ ಮನೆ ಎಳ್ಳು ಬೆಲ್ಲ ತಿನ್ನುವಂತೆ ಮಾಡಿದ್ಲಲ್ಲಾ ಅಂತ ಆ ಮಾತೃ ಹೃದಯ ವಿಲವಿಲಾ ಅಂತ ಒದ್ದಾಡಿ ಹೋಯ್ತೇನೋ! ಇರಲಿ ಇರಲಿ ಇದ್ದಿದ್ದೇ ಅಂದುಕೊಂಡು, ಮಕ್ಕಳ ಹೋಮ್ ವರ್ಕ್ ವಿಚಾರಿಸುತ್ತಾ, ಶಾಸ್ತ್ರಕ್ಕೆ ಎಳ್ಳು ಬೆಲ್ಲ, ತೊವ್ವೆ, ಪಾಯಸಕ್ಕೆ ಅಣಿ ಮಾಡಿಕೊಳ್ಳಲು ಶುರು ಮಾಡಿದೆ.

ಸಂಕ್ರಾಂತಿ ಪಾಟ್ಲಕ್ ಇನ್ನೇನು ಶನಿವಾರ ಬಂದೇಬಿಡುತ್ತೆ. ಭರ್ಜರಿ "ಇನ್ಸ್ಟೆಂಟ್ ಪಾಟ್" ಬಿಸಿಬೇಳೇ ಭಾತ್ ನಮ್ಮ ಅಡುಗೆಮನೆಯಿಂದ. ಚಿಟಿಕೆ.... ಚಿಟಿಕೆ ಹೊಡೆಯೋದ್ರಲ್ಲಿ ತಯಾರು, ಅಲ್ವಾ?

ಈ ದೇಶದಲ್ಲಿ ಹಬ್ಬ ವೀಕ್ ಡೇ ಬಂದ್ರೇನಂತೆ, ಇಲ್ಲಿ ನೆಲೆಸಿರುವ ನಾವು, ಅದೇ ದಿನ ಹಬ್ಬ ಮನೆಮಟ್ಟಿಗೆ ಮಾಡಿಕೊಂಡು, ವೀಕೆಂಡ್ ವಿಜೃಂಭಣೆಯಿಂದ ಸ್ನೇಹಿತರ ಜೊತೆಗೂಡಿ ಮಾಡಿ ಸಂಭ್ರಮಿಸಿ, ಕೊನೆಗೆ ಮತ್ತೊಂದು ದಿನ ಕನ್ನಡ ಸಂಘದಲ್ಲಿ ಸಹ ಇಡೀ ಊರಿನ ಕನ್ನಡಿಗರೆಲ್ಲಾ ಸೇರಿ ಮಹಮ್ಮೇರಿಯಾಗಿ ಹಬ್ಬ ಆಚರಿಸಿಕೊಳ್ತೀವಿ ನೋಡಿ. ಒಟ್ಟು ಮೂರ್ ಸಲ! ಕನ್ನಡ, ಕರ್ನಾಟಕ, ಕನ್ನಡತನ ಅಂದರೆ ನಮಗೆ ಅಷ್ಟು ಹೆಮ್ಮೆ, ಪ್ರೀತಿ ಮತ್ತು ಆದರ. ಸಪ್ತ ಸಮುದ್ರಗಳನ್ನ ದಾಟಿ ಬಂದಿದ್ರೂ ಸರಿ, ನಮ್ಮ ಕನ್ನಡದ ವೈಶಿಷ್ಟ್ಯಗಳನ್ನಾಗಲಿ, ಹಿರಿಮೆಯನ್ನಾಗಲೀ ಮರೆಯಲು ಸಾಧ್ಯವಿಲ್ಲ. ಪದ್ಧತಿ ಪರಂಪರೆಗಳನ್ನ ತೊರೆಯಲು ಸಾಧ್ಯವಿಲ್ಲ.

ಹಾಂ! ಇಷ್ಟೆಲ್ಲಾ ಹೇಳಿದ ಮೇಲೆ ಒಂದು ಮುಖ್ಯ ಕಾರ್ಯಕ್ರಮವನ್ನು ಮರೀಬಾರದು.... ನಮ್ಮ ಬೀದಿಯ ಆ ಕನ್ನಡದ ಮನೆಗೆ " ಬೀರದ್ ಎಲ್ ((ಅಲ್ಲ ಎಳ್ ))" ಮಾಡೋದನ್ನ...

# ನಮ್ಮ ಸಂಸ್ಕೃತಿ
• ಹರಿಚರಣ್

ಈ ಹೊತ್ತಿಗೆ ಬಹು ಚರ್ಚಿತವಾದ ಅಥವಾ ವಿವಾದಾತ್ಮಕ ಪದ ಎನ್ನಬೇಕಾದರೆ ಅದು ಸಂಸ್ಕೃತಿ. ಇದರ ಇಂಗ್ಲಿಷ್ ಮೂಲ ಪದವಾದ "ಕಲ್ಚರ್" ಎಂಬುದು ಇಂದಿನ ಲೋಕ ವ್ಯವಹಾರದಲ್ಲಿ ಅತಿಶಯವಾದ ಬಳಿಕೆ ಹೊಂದಿದೆ. ಈ ಪದಕ್ಕೆ ನಿರ್ದಿಷ್ಟವಾದ ಅರ್ಥ ಇಲ್ಲದಿದ್ದರೂ ಬಹುತೇಕವಾಗಿ ಒಪ್ಪಿಕೊಂಡಿರುವ ಅರ್ಥ ಎಂದರೆ "ಗೌರವಿಸು", "ನಿಷ್ಕೆಮಾಡು " ,"ಲಕ್ಷ್ಯದಲ್ಲಿರಿಸಿಕೊ" ಎಂಬ ರೀತಿಯಲ್ಲಿ. ನಮ್ಮ ಕಾರ್ಪೊರೇಟ್ ಜಗತ್ತಿನಲ್ಲಿ " ಯಾವ ನಡವಳಿಕೆಯನ್ನು ಪ್ರಶಂಸಿಸಿ ಪ್ರೋತ್ಸಾಹಿಸುತ್ತೀವೋ ಅಥವಾ ಯಾವುದನ್ನು ಶಿಕ್ಷಿಸಿ ಧಿಕ್ಕರಿಸುತ್ತೀವೋ" ಅದು ನಮ್ಮ ಕಲ್ಚರ್ (ಸಂಸ್ಕೃತಿ) ಆಗಿ ಉಳಿಯುವುದೆಂದು ದೃಢವಾಗಿ ನಂಬಿರುವ ಸಿದ್ಧಾಂತ. ಸಾವಿರಾರು ಮೈಲಿ ನಮ್ಮ ಮಾತೃಭೂಮಿಯನ್ನು ಬಿಟ್ಟು ಇಲ್ಲಿಗೆ ವಲಸೆ ಬಂದು ತಾತ್ಕಾಲಿಕವಾಗಿಯೋ ಇಲ್ಲವೇ ಶಾಶ್ವತ ನೆಲೆ ಮಾಡಿಕೊಂಡಿರುವ ನಾವು ಸಂಸ್ಕೃತಿಯನ್ನು ಅರ್ಥೈಸಿಕೊಳ್ಳುವ ಬಗೆ ಹೇಗೆ ಅಥವಾ ಅದರ ಅವಶ್ಯಕತೆಯಾದರೂ ಏನು ?

ನಮ್ಮಲ್ಲಿ ಎಷ್ಟೋ ಮಂದಿ ನಮ್ಮ ಆಚಾರ ವಿಚಾರವನ್ನೂ, ಭಾಷಾ ಪ್ರೇಮವನ್ನೋ, ಸಂಗೀತ ಮೊದಲಾದ ಲಲಿತ ಕಲಾಭಿರುಚಿಯನ್ನೋ ಸಂಸ್ಕೃತಿಯೆಂದು ನಂಬಿರುತ್ತಾರೆ. ಆದರೆ ಅದು ಯಾವುದು ಸಂಸ್ಕೃತಿಯಾಗಿ ಪೂರ್ಣವಾಗಿ ಪರಿಗಣನೆಗೆ ಬರದು. ಸಂಸ್ಕಾರದಿಂದ ಸಂಸ್ಕೃತಿ. "ಸಂಸ್ಕಾರ" ಎಂದರೆ ಶುದ್ಧಿಗೊಳಿಸುವುದು , ಉತ್ತಮ ಪಡಿಸುವುದು ಎಂದು ಅರ್ಥ. ಈ ಶುದ್ಧಿಯು ನಮ್ಮ ಅಂತರಂಗದ ಶುಚಿತ್ವ. ಎಲ್ಲ ಜೀವ ರಾಶಿಗಳಲ್ಲಿ ಮನುಷ್ಯನಿಗೆ ಮಾತ್ರ ಇದರ ಪರಿಕಲ್ಪನೆ ಇರತಕ್ಕದು ಹಾಗು ಅದನ್ನು ಸಾಧಿಸಿಕೊಳ್ಳುವ ಹಂಬಲ ಇರುವುದು. ಆ ಶುದ್ಧಿಯು ಸಮಾಜದೊಂದಿಗೆ ನಮ್ಮ ನಡವಳಿಕೆಯನ್ನು ಹಿತವಾಗಿಸಿ ಒಂದು ಔಚಿತ್ಯವನ್ನು ಏರ್ಪಡಿಸುತ್ತದೆ, ಅದೇ ಸಂಸ್ಕೃತಿ.

ಸಂಸ್ಕೃತಿಯು ಜಡವಾಗಿ ಉಳಿಯದೆ ಕಾಲ ದೇಶಗಳೊಂದಿಗೆ ಮಾರ್ಪಾಡುಗೊಳ್ಳುತ್ತದೆ. ಹೊರನಾಡಿನಲ್ಲಿ ಸಂಸ್ಕೃತಿಯನ್ನು ನಿರ್ಧಯಿಸಿಕೊಳ್ಳುವ ಕೆಲಸ ಕಷ್ಟವೆಂದು ತೋರುವುದು ಸಹಜ. ನನ್ನಂಥವರು ತಮ್ಮ ಬಹುತೇಕ ಜೀವನವನ್ನು ಒಂದು ದೇಶದಲ್ಲಿ ಕಳೆದು, ಅದರಲ್ಲೂ ಮಾನಸಿಕ ವಿಕಾಸವು ಅಲ್ಲಿಯ ಪರಿಸರದಿಂದ ರೂಪಗೊಂಡು ಮತ್ತೊಂದು ದೇಶಕ್ಕೆ ಕಾಲಿಟ್ಟಾಗ ಒಂದು ರೀತಿಯ ಭಯವನ್ನು ಉಂಟುಮಾಡುತ್ತದೆ. ಆ ಭಯದ ಕಾರಣ ಹೊಸ ದೇಶದ ಸಂಸ್ಕೃತಿಯು ನಮ್ಮ ಮೇಲೆ ಮಾಡುವ ಪ್ರಭಾವಕಿಂತಲೂ ನಮ್ಮ ಮಕ್ಕಳ ಮೇಲೆ ಮಾಡುವ ಪರಿಣಾಮದಿಂದ. ಈ ಭಯ ಸರಿಯೇ ತಪ್ಪೋ ಎಂದು ವಾದ ಮಾಡದೇ ನಾನು ನನ್ನ ಮಟ್ಟಿಗೆ ಕಂಡು ಕೊಂಡಿರುವ ಪರಿಹಾರ ಹಾಗು ನನ್ನ ವಿಚಾರವನ್ನು ಇಲ್ಲಿ ಮಂಡಿಸುತ್ತೇನೆ.

ಮೊದಲಿಗೆ ಮಹಾತ್ಮಾ ಗಾಂಧಿಯವರ ಈ ಮಾತು ಸ್ಮರಣೆಗೆ ಬರುತ್ತದೆ " I do not want my house to be walled in on all sides, nor my windows to be shut. I want the cultures of all lands to blow about my house as freely as possible; but I refuse to be blown off my feet by any of them. I refuse to live in other people's houses as an interloper, a beggar or a slave."

ನಮ್ಮ ಬುದ್ಧಿಶಕ್ತಿಯು ಮಕ್ಕಳಿಗಿಂತ ಕೊಂಚ ದೃಢವಾಗಿರುವುದರಿಂದ ( ಆ ನಂಬಿಕೆಯಿಂದ :)) ನಾವು ಹೊಸ ಆಚಾರ ವಿಚಾರವನ್ನು ನಮ್ಮ ಅಭಿರುಚಿ, ಧರ್ಮ ಚಿಂತನೆಯ ಪರಿಜ್ಞಾನದ ಜಾಲರಿಯಿಂದ ಸೋಸಿ ಅಳವಡಿಸಿ ಸಮತೋಲನವನ್ನು ಹೊಂದುವಲ್ಲಿ ಯಶಸ್ವಿಗೊಳುತ್ತೇವೆ. ಆದರೆ ಮಕ್ಕಳ ವಿಚಾರದಲ್ಲಿ ಅವರ ಮಾನಸಿಕ ವಿಕಸನವು ಹಾಗು ಜನ ಸಂಪರ್ಕವು ಬೇರೊಂದು ಸಂಸ್ಕೃತಿಯನ್ನು ಅವಲಂಬಿಸಿರುವ ಜನರೊಂದಿಗೆ ನಡೆಯುವದರಿಂದ ನಮ್ಮ ತಳಮಳ ಹೆಚ್ಚುತ್ತದೆ. ಅವರು ನಮ್ಮ ಸಂಸ್ಕೃತಿಯ ಅಧಿಕೇಂದ್ರದಿಂದ ದೂರವಿರುವಂತೆ ಭಾಸವಾಗುತ್ತದೆ. ಅದಕ್ಕೆ ಕಾರಣ ಪಾಶ್ಚಿಮಾತ್ಯ ಹಾಗು ಈಶಾನ್ಯ ದೇಶಗಳು ಬೆಳದು ಬಂದ ಹಾದಿ. ಪಾಶ್ಚಿಮಾತ್ಯ ದೇಶಗಳು ವ್ಯಕ್ತಿ ಸ್ವಾತಂತ್ರ್ಯ, ಅವನ ಸುಖಾನುಭವಗಳಿಗೆ ಮನ್ನಣೆ ನೀಡಿದರೆ, ಈಶಾನ್ಯ ದೇಶಗಳು ಸಮಾಜದ ಹಿತೈಶೆ , ಒಟ್ಟಾರೆ ಒಂದು ಕುಟುಂಬ, ಗ್ರಾಮ ಹಾಗು ದೇಶದ ಬಗ್ಗೆ ಒತ್ತು ಕೊಡುತ್ತದೆ. ಇದರ ಜೊತೆಗೆ ಭಾರತ ದೇಶದಂಥ ಪುರಾತನ ನಾಗರಿಕತೆ, ಕಾಲಚಕ್ರ ಉರುಳಿದಂತೆ ಅದರ ಮೇಲೆ ಆದ ವಿವಿಧ ಮತ, ಪ್ರಾಂತ್ಯ ಹಾಗು ಜನಾಂಗದ ಆಕ್ರಮಣವನ್ನು ಸಹಿಷ್ಣಿಸಿ

ಬೆಳಸಿಕೊಂಡಿರುವ ಸಂಸ್ಕೃತಿಯನ್ನು ಇನ್ನು ಯೌವನದಲ್ಲಿರುವ ನಾಗರಿಕತೆಗೆ ಹೋಲಿಸುವದು ಅಷ್ಟು ಸರಿಯಲ್ಲವೆಂದು ತೋರುತ್ತದೆ. ಉದಾಹರಣೆಗೆ ಮನೋವಿಜ್ಞಾನದಲ್ಲಿ ಗೋಚರವಾಗುತ್ತಿರುವ ಎಷ್ಟೋ ಸಿದ್ಧಾಂತಗಳನ್ನು ಉಪನಿಷತ್ ನಲ್ಲಿ ಕಾಣಬಹುದು. (Maslow's hierarchy of needs which came in 20th century very much echoes the thoughts of Taittiriya upanishad or Empathy which is gaining so much momentum has been there as a concept of anubuthi in India for a long time).
ಮಕ್ಕಳಿಗೆ ಉತ್ತಮವಾದ ಸಂಸ್ಕೃತಿಯನ್ನು ಕೊಡುವುದೆಂದರೆ ಪಾಶ್ಚಿಮಾತ್ಯದಲ್ಲಿ ಒತ್ತು ಕೊಡುವ ಪುರುಷ ಪ್ರಯತ್ನ, ವೈಜ್ಞಾನಿಕ ಚಿಂತನೆ ಹಾಗು ನಮ್ಮ ಅಂತರಂಗದ ಬೆಳವಣಿಗೆಗೆ ಸೂಕ್ತವಾಗಿ ಒದಗಿಬರುವ ನಮ್ಮ ಆಧ್ಯಾತ್ಮಿಕ ಚಿಂತನೆಯಿಂದ ಅಭಿಮಂತ್ರಿಸುವುದು.

ಕಡೆಯದಾಗಿ ನಾನು ಹೇಳಬಯಸುವುದೇನೆಂದರೆ ನಮ್ಮ ಸಂಸ್ಕೃತಿಯೊಂದಿಗೆ ಗುರುತಿಸಿಕೊಳ್ಳಲು, ಬಾಹ್ಯ ಪ್ರದರ್ಶನಕ್ಕಿಂತಲೂ ಹೆಚ್ಚಾಗಿ ನಮ್ಮ ಅಂತಃಕರಣದಲ್ಲಿ ನಿಲ್ಲಿಸಿ ಬೆಳಸುವುದು ಅತ್ಯವಶ್ಯ.

# College Prep Seminar

Avani & Arnav Kashyap

On Saturday, December 16th 2017 at the William T. Cosby Public Library in Coppell, MKANT organized its first ever College Prep Seminar presented by Mr. Rajkamal Rao. A new venture for MKANT as an organization, it became an instant success as the vast knowledge and passion of the speaker combined with the active audience to give a fitting end to another great year for MKANT in 2017. The guest presenter, Mr. Rajkamal Rao has helped hundreds of students gain admission to the nation's most sought-after universities as well as authored a book on college selection and founded a full-service college admission and counseling firm. The attendees of the seminar were educated on the different aspects of college admission such as the combination of the acceptance and yield rates.







The yield rate is an integral aspect of the college admission process that is the percent of students who choose to enroll in a particular university after having been offered admission. Mr. Rao allowed the audience to gain an insider's look into what colleges truly look for in an applicant. The presentation emphasized the importance of your high school academic grades in the 5 core subjects of MSHEL (Math, Science, History, English, and Foreign Language) as well as course selection recommending 4 years of the MSHE courses and at least 3 years of a foreign language. Advanced courses such as AP classes and the IB program were highly encouraged to showcase the applicants' readiness to take college level courses. Furthermore, the presentation expounded on the importance that colleges place on standardized test scores such as the SAT and ACT.

Most importantly, it revealed that it is never too early to start thinking about college and preparing a good high school pathway is the key to success. The seminar opened many new doors for both parents and students and the informative and educational presentation was then followed by a Q&A session.

It was a memorable co-incidence that Mr.Sunil Hiranniah, an active member of MKANT presented the speaker a copy of "Hindustan Times"(a National News paper of India) which he purchased at the Mumbai airport. And it had Mr.Rao's picture and article in front page! The article was about the college selection tips and visa process for the Indian students planning for higher education in US.

# ಕೇಫ಼

ಗುರುಪ್ರಸಾದ್ ವೆಂಕಟರಾಮು

ಕನ್ನಡ ಸಾಹಿತ್ಯ ಲೋಕಕ್ಕೆ ಕೇಫ಼ ಎಂದೇ ಪರಿಚಿತರಾದ ಎ.ವಿ ಕೇಶವಮೂರ್ತಿಯವರದು ವಿಶಿಷ್ಟ ಕೊಡುಗೆ.

ಸುಧಾ ವಾರಪತ್ರಿಕೆ ಮತ್ತು ಪ್ರಜಾವಾಣಿ ವಿಶೇಷಾಂಕಗಳನ್ನು ಓದುತ್ತಿದ್ದವರಿಗೆ ಕೇಫ಼ರ ಹಾಸ್ಯ ಬರಹಗಳ ಪರಿಚಯವಿರುತ್ತದೆ. ಬೇರೆಲ್ಲ ಬರಹಗಾರರಿಗಿಂತ ಬಲು ಭಿನ್ನ ಇವರ ಶೈಲಿ.

ಎಂಭತ್ತರ ದಶಕದ ಮೈಸೂರು ನಗರವನ್ನು ಕಲ್ಪಿಸಿಕೊಳ್ಳಿ. ಆಧುನಿಕ ಬದುಕಿನ ಜಂಜಾಟವಿಲ್ಲದ, ಇನ್ನೂ ಕೊಂಚ ನಿಧಾನ ಗತಿಯ ಆರಾಮ ಜೀವನ ಶೈಲಿ. ಕಥಾನಾಯಕ ಪಾಂಡುವಿಗೆ ನಮ್ಮ ನಿಮ್ಮಂತೆ ವೃತ್ತಿ, ಕೆಲಸಗಳ ಗೋಜುಗಳಿದ್ದಂತೆ ಕಾಣುವುದಿಲ್ಲ. ಟೈಮಿಗೆ ಸರಿಯಾಗಿ ಕಾಫ಼ೀ, ಬ್ರೇಕ್‌ಫ಼ಾಸ್ಟ್, ಲಂಚ್ ಮಾಡುವುದು. ಸಂಜೆಯ ಹೊತ್ತಿಗೆ ಸ್ವಲ್ಪ ರೆಸ್ಟ್ ತೆಗೆದುಕೊಂಡು, ನೀಟಾಗಿ ಬಟ್ಟೆ ಧರಿಸಿ ಮೈ.ಸಂ (ಮೈಗಳ್ಳರ ಸಂಘ)ಕ್ಕೆ ಭೇಟಿ ಕೊಟ್ಟು ಗೆಳೆಯರೊಂದಿಗೆ ಕುಳಿತು ಗುಂಡೇರಿಸುವುದು.

ಪಾಂಡುವಿನ ಅಡುಗೆ ಭಟ್ಟ ಕಮ್ ಆಪ್ತ ಸಹಾಯಕ ಕಮ್ ಆಪ್ತ ಭಾಂಧವ ಶೌರಿ. ಪ್ರಚಂಡ ಬುದ್ಧಿವಂತಿಕೆಯ ಶೌರಿ ಎಂಥದೇ ಸಮಸ್ಯೆಯಿರಲಿ ಪರಿಹರಿಸಬಲ್ಲ ಚಾಣಾಕ್ಷ.

ಮೈಗಳ್ಳರ ಸಂಘದಲ್ಲಿ ಪಾಂಡುವಿನ ಗೆಳೆಯರ ಬಳಗವೇ ಇರುವುದು. ಸಂಘದ ಅಧ್ಯಕ್ಷ ಟಿಪ್ಸೀ. ಪೀಟರ್, ಬಷೀರ್, ಭಾನ್ ಸಿಂಗ್, ಬಾಬು, ಜಗ್ಗ, ರಾಘಣ್ಣಿ, ಫ಼ಾಸ್ಟ್ ಬೌಲರ್ ಶಿಂಗ್ರಯ್ಯಂಗಾರಿ - ಎಲ್ಲರದೂ ಜೀವನದಲ್ಲಿ ಒಂದೇ ಪಾಲಿಸಿ. ಸಂಘದ ಕಡೆಯಿಂದ ಹಲವಾರು ಕಾರ್ಯಕ್ರಮಗಳನ್ನು ಏರ್ಪಡಿಸಿ, ಕೈಲಾದಷ್ಟು ಗುಂಡೇರಿಸುವುದು.

ಸಂಘದಲ್ಲಿ ವಿವಿಧ ಅಭಿರುಚಿಯ ಗ್ರೂಪ್‌ಗಳು ಇರುವವು :)

- ಇಟ್ಟಿಗೆ ಗೂಡು ಡೂನ್ಸ್ ಗ್ರೂಪ್ (ಐ.ಜಿ.ಡಿ)
- ಅಮೃತಾ ಸಿಂಗ್ ಅಭಿಮಾನಿ ಗ್ರೂಪ್ (ಎ.ಎ.ಜಿ)
- ಮೆಟ್ರಿಕ್ ರಿಪೀಟರ್ಸ್ ಗ್ರೂಪ್ (ಎಂ.ಆರ್.ಜಿ)
- ರೇಖಾ ಪೈಥ್ಯಂ ಗ್ರೂಪ್ (ಆರ್.ಪಿ.ಜಿ)

ಪಾಂಡು, ಶೌರಿ, ಮೈಗಳ್ಳರ ಸಂಘದ ಸದಸ್ಯರುಗಳ ಜೊತೆಗೆ ಇನೂ ಹಲವು ವಿಶೇಷ ಪಾತ್ರಗಳೂ ಇರುವವು - ಘಂಟಾ ಘೋಷ ಪತ್ರಿಕೆಯ ಎಡಿಟರ್ ಉಜ್ಜನಪ್ಪ, ಬುಲ್ ಬುಲ್ ತರಂಗ್ ಗುರು ತಿಪ್ಪಣ್ಣ, ಶೌರಿಯ ಭಾವ ಅಖಿಲಾಂಡಯ್ಯ, ಡೋಂಟ್ ಫ಼ಿಕರ್ ಬಸ್ಸಿನ ಡ್ರೈವರ್ ಖಾದರ್, ಹುಚ್ಚರ ಡಾಕ್ಟರ್ ಭುಜಂಗರಾವ್. ಇವರೆಲ್ಲಾ ಸೇರಿಕೊಂಡು ನಡೆಯುವ ತಿಳಿಹಾಸ್ಯ ಪ್ರಸಂಗಗಳೇ ಕೇಫ಼ರ ಬರಹಗಳ ತಿರುಳು.

ಓದುತ್ತಾ ಹೋದಂತೆ, ಬೇರೆಯದೇ ಒಂದು ಲೋಕ ನಮ್ಮ ಮುಂದೆ ಸೃಷ್ಟಿಯಾಗುವುದು ಅವರ ಲೇಖನಿಯ ತಾಕತ್ತು.

ಎಸ್. ದಿವಾಕರ್ ಅವರು "ಬೆಸ್ಟ್ ಆಫ್ ಕೇಫ಼" ಎಂಬ ಹೆಸರಿನಲ್ಲಿ ಕೇಫ಼ರ ಬರಹಗಳನ್ನು ಸಂಗ್ರಹಿಸಿದ್ದಾರೆ (ಪ್ರಕಾಶಕರು: ಅಂಕಿತ ಪುಸ್ತಕ). ತಪ್ಪದೇ ಓದಿ.

# ಯಕ್ಷಪ್ರಶ್ನೆ

ವಾಸು ಪೋತದಾರ

ಒಮ್ಮೆ ಯೋಚಿಸಿದೆ
ಈ ಜಗದ ಆದಿ-ಅನಾದಿಗಳ ಕುರಿತು

ಆಗ ವಿಜ್ಞಾನಿಗಳು ಹೇಳಿದರು -
"ಈ ಭೂಮಿ ಸೂರ್ಯನ ಒಂದು ತಣ್ಣಗಾದ ತುಣುಕು,
ಇಲ್ಲಿನ ಜೀವಸಂಕುಲ ಅಮೀಬಾದ ವಂಶವೈವಿಧ್ಯ"
ವೈದಿಕರೆಂದರು - "ಅಲ್ಲಲ್ಲ, ಇದು ಮನುಕುಲ,
ಈ ಬ್ರಹ್ಮಾಂಡ ಭಗವಂತನ ಸೃಷ್ಟಿ"

ಮತ್ತೊಂದು ಸಂಶಯ ಮೊಳೆಯಿತು -
ಕೇಳಿದೆ - ಅದಿರಲಿ, ಈ ವಿಶ್ವದ ಆರಂಭ ಹೇಗಾಯಿತೆಂದು?

ಕನ್ನಡಕವನ್ನೇರಿಸುತ್ತ ವಿಜ್ಞಾನಿಗಳೆಂದರು -
"ಇನ್ನೂ ಯೋಚಿಸುತ್ತಿದ್ದೇವೆ"
ಜುಟ್ಟನ್ನು ನೀವುತ್ತ ಪಂಡಿತರು ಬೀಗಿದರು -
"ಇದು ಭಗವಂತನ ಮಹಿಮೆ,
ಮತ್ತೆ ಮುಂದೆ ಆತನ ಹುಟ್ಟಿನ ಕುರಿತು ಕೇಳೀರೋ ಜೋಕೇ?
ಆತ ಆದ್ಯಂತರಹಿತ"

ನಾಸ್ತಿಕರಾದ ವಿಜ್ಞಾನಿಗಳು ಗುಡುಗಿದರು -
"ಭಗವಂತ ಭಗವಂತ! ಅದು ನಿಮ್ಮ ಭ್ರಮೆ,
ನಿಮ್ಮನ್ನು ನಂಬಲು ವಿಜ್ಞಾನಕ್ಕೆ ಪ್ರಮಾಣ ಬೇಕು"
ಮಂದಸ್ಮಿತ ಪಂಡಿತರ ಉವಾಚ -
"ನಿಮ್ಮನ್ನು ನಂಬಲು ನಮಗೆ ಖಚಿತ ಉತ್ತರ ಬೇಕು"

ನಿಜವೆನಿಸಿತು, ಖಚಿತ ಉತ್ತರವಿಲ್ಲದ ವಿಜ್ಞಾನವನು ನಂಬುವದು ಹೇಗೆ?
ಆದರೆ ನೆನಪಾಯಿತು ಆಗ
ದಿನನಿತ್ಯದ ನಮ್ಮ ಬಾಳಿನಲಿ ವಿಜ್ಞಾನದ ಕೊಡುಗೆ
ಯೋಚಿಸಿದೆ ಯಾವುದು ಸರಿಯೆಂದು
ಹೊಳೆಯಲಿಲ್ಲ!

ಕೊನೆಗೆ -
ಸೃಷ್ಟಿಸಿದ ಭಗವಂತನಿಗೆ ಕೈಮುಗಿದು,
ವಿಜ್ಞಾನದ ಕೊಡುಗೆಗೆ ಕೃತಜ್ಞತೆ ಸಲ್ಲಿಸಿ,
ಸುಮ್ಮನಾದೆ.

## ಕೇಳು ಒಲವೇ

ಶಶಿಕಿರಣ್

ಸರಸರನೆ  ಬಂದೆ, ಓರೆ ನೋಟದಿ ನಗೆಯ ಬೀರಿ
ಕಣ್ಣಲ್ಲೇ ಕಾವಲುಗಾರನಾದೆ, ಪ್ರತಿ ಕ್ಷಣವೂ ಅದೇ ನಗುವ ಕೋರಿ .

ಕಣ್ಣಿಗೆ ನಗುವ ಎರಚಿ , ಹೃದಯದಿ ನುಸುಳಬೇಡ
ಒಮ್ಮೆ ಒಳಬಂದರೆ ನಾನಲ್ಲ ಕ್ಷಮಿಸಿ ಹೊರಬಿಡುವ ಉದಾರಿ .

ಅಷ್ಟಕ್ಕೂ ಗುಮ್ಮನೆ ಒಳಸಂಚು ಏಕೆ? ಗುಟ್ಟೊಂದ ಹೇಳುವೆ ಕೇಳು!
ನಿನ್ನ ಹೊರತು ಇಲ್ಲಾರಿಗೂ ಪ್ರವೇಶವಿಲ್ಲ , ನಿನಗಾಗಿಯೇ ಈ ರಹದಾರಿ

ಮನವೀಗ ಬೆಳದಿಂಗಳಿನ ಅಂಗಳವಾಗಿದೆ
ಪ್ರೀತಿಯ ಕೈತುತ್ತು ತಿನಿಸು  ಬಾ ಗೆಳತಿ !

ನಿನ್ನ ಕನಸುಗಳ ಕಥೆ ಹೇಳುತ್ತಾ
ಭಾವನೆಗಳ ಬೆಸೆಯುತ್ತ ಇಬ್ಬರೇ ಕೂರೋಣ

ಹರೆಯದ ಆಸೆಗಳ ಹಂಗಿಲ್ಲದೆ ಹಾಸು ,
ಜೊತೆಯಾಗಿ ಸವಿಯೋಣ ಬೆಳಗಿನ ಆಯಾಸ ಕಳೆಯೋಣ .

ಹೊತ್ತು ಹೋಗುವವರೆಗೂ , ಕಣ್ಣಿಗೆ ನಿದ್ದೆ ಬರುವವರೆಗೂ ,
ಎಲ್ಲ ನಕ್ಷತ್ರಗಳ ಎಣಿಸುವವರೆಗು ನಿನ್ನೊಡನೆ ನಾನಿರುವೆ !

## ನಿರೀಕ್ಷೆ

ಪೂರ್ಣಿಮಾ ಸುಬ್ರಹ್ಮಣ್ಯ

ಅನಾದಿ ಕಾಲದಿಂದಲೂ
ಅವನಿ,
ಇಬ್ಬನಿಯ ಮಣಿಗಳನ್ನಾರಿಸುತ್ತಲೇ ಇದ್ದಾಳೆ,
ಹಾರವಾಗಲೇ ಇಲ್ಲ !

ಅನಾದಿ ಕಾಲದಿಂದಲೂ
ರಜನಿ,
ಚುಕ್ಕೆಗಳನ್ನಿಡುತ್ತಲೇ ಇದ್ದಾಳೆ,
ಚಿತ್ರವಾಗಲೇ ಇಲ್ಲ !

ಸಣ್ಣ ಪುಟ್ಟ ನಿರೀಕ್ಷೆಗಳು
ಫಲಿಸದೆ , ಕೊರಗುವ
ನನ್ನ ಮರುಳಿಗೆ
ನಗೆ ಬಂತು !

ಮುಂಜಾನೆ ಅವನಿಗೆ
ಇಬ್ಬನಿಯನೆತ್ತಿಕೊಟ್ಟೆ!
ರಾತ್ರಿ ರಜನಿಗೆ
ಚುಕ್ಕೆಗಳನೆಣಿಸಿಕೊಟ್ಟೆ!

## ನಾನು ನೋಡಿದ ಮೊದಲ ಕನ್ನಡ ಚಲನಚಿತ್ರ

ಯಾಮಿನಿ ಜೋಯಿಸ್


The first Kannada movie I watched was “Lucia” by Pawan Kumar.

This movie is about a young man by name Nikki. Nikki is an insomniac who just can’t fall asleep at night. One night, he meets a drug dealer and starts taking a drug called “Lucia” which was supposed to help him fall asleep. After taking the drug, Nikki starts seeing lucid dreams and starts dreaming of himself as a famous movie star, Nikhil.
As the story progresses, the audience will begin to be confused between two characters. Who is living the reality? And who is in the dream? It is left to the audience’s ingenuity. It is for them to figure out what is reality and what is dream.
This movie combined many elements together; comedy, mystery, romance and some thriller. I enjoyed this movie very much because not only was it very funny, but the plot kept me guessing throughout.
Finally, message from the movie is that “Everyone wants to be someone else”. Nikki wishes to be the famous movie star whereas the movie star wants to live a simple life like Nikki.
To be honest, I was quite confused in the middle. But by the end, when I understood it completely, I had to say, “Ohhhhhh!” Please do watch this movie when you have chance, it is a unique experience.

ಸ್ಕಂದ ಸುನೀಲ್




ಸ್ತುತಿ ಸುನೀಲ್



Rangoli

Rangoli was first discovered in the Indian subcontinent. Rangoli is made out of materials such as colored rice, dry flour, Colored sand or flower petals.

The purpose of rangoli is to make colorful decorations and it is known for bringing good luck. Desgins also vary depending on the traditions and practices.

By: Stuthi Sunil

**ವಿಶೇಷ್ ಪ್ರಸಾದ್**

## ಮಕರ ಸಂಕ್ರಾಂತಿ

ಈ ದಿನ ಸೂರ್ಯದೇವನು ಮಕರ ರಾಶಿಯಲ್ಲಿ ಸಂಕ್ರಮಣ ಮಾಡುತ್ತಾನೆ, ಹಾಗೂ ಸೂರ್ಯನ ಉತ್ತರಾಯಣವು ಆರಂಭವಾಗುತ್ತದೆ. ಮಕರಸಂಕ್ರಾಂತಿ ಇಂದ ಕರ್ಕಾಟಕ ಸಂಕ್ರಾಂತಿಯ ವರೆಗೆ ಉತ್ತರಾಯಣವು ಇರುತ್ತದೆ. ಉತ್ತರಾಯಣದ ಆರು ತಿಂಗಳುಗಳು ಉತ್ತಮವಾಗಿರುತ್ತವೆ. ಕರ್ಕಾಟಕ ಸಂಕ್ರಾಂತಿ ಇಂದ ಮಕರ ಸಂಕ್ರಾಂತಿಯ ವರೆಗಿನ ಕಾಲಕ್ಕೆ ದಕ್ಷಿಣಾಯಣ ಎನ್ನುತ್ತಾರೆ. ಸಾಮಾನ್ಯವಾಗಿ ಮಕರ ಸಂಕ್ರಾಂತಿಯು ಜನವರಿ 14ನೇ ತಾರೀಕಿಗೆ ಬರುತ್ತದೆ. ಈ ಹಬ್ಬವು ದೇಶದ ವಿವಿಧ ಸ್ಥಳಗಳಲ್ಲಿ ವಿಭಿನ್ನ ಹೆಸರುಗಳಲ್ಲಿ ಆಚರಿಸಲ್ಪಡುತ್ತದೆ. ಇದನ್ನು ಅನೇಕ ಜನರು ಬಹಳ ಉತ್ಸಾಹದಿಂದ ಹಾಗೂ ಶ್ರದ್ಧಾಪೂರ್ವಕವಾಗಿ ಆಚರಿಸುತ್ತಾರೆ.
"ಎಳ್ಳು ಬೆಲ್ಲ ತೆಗೆದುಕೊಂಡು ಒಳ್ಳೆ ಮಾತನಾಡೋಣ"


ವಿಶೇಷ ಪ್ರಸಾದ್

**ಐಸಿರಿ ಪ್ರಸಾದ್**

## ಕ್ಲಾರಿನೆಟ್ ವಾದ್ಯ

ಕ್ಲಾರಿನೆಟ್, ಇದು ಮರದಿಂದ ಮಾಡುವ ವಾದ್ಯಗಳ ಜಾತಿಗೆ ಸೇರಿದೆ. ಇದಕ್ಕೆ ಒಂದು ರೀಡ್ ಇರುವ ಮೌತ್ ಪೀಸ್, ಸಿಲಿಂಡ್ರಿಕಲ್ ಟ್ಯೂಬ್ ಮತ್ತು ಗಂಟೆಯಾಕಾರದ ತುದಿ ಹೊಂದಿರುತ್ತದೆ. ಈ ವಾದ್ಯವನ್ನು 1690 ರಲಿ ನ್ಯೂರಂಬರ್ಗ್‌ನ ಜಾನ್ಸನ್ ಕ್ರಿಸ್ಟೋಫ್ ಕಂಡುಹಿಡಿದಿರುತ್ತಾರೆ. ಆ ಕಾಲದಲ್ಲಿ ಇದಕ್ಕೆ ಬ್ರಾಸ್ ಮತ್ತು ಸ್ಪ್ರಿಂಗ್‌ನಿಂದ ಮಾಡಿದ ಬರಿ ಎರಡು ಮನೆಗಳು ಮಾತ್ರ ಇದ್ದುವು. ಆ ಕಾಲದಲ್ಲಿ ಈ ವಾದ್ಯವನ್ನು ಯುರೋಪಿನಾದ್ಯಂತ ಈ ತರಹ ಒಂದು ರೀಡನ ವಾದ್ಯಗಳ ಜೊತೆಯಲ್ಲಿ ಬಳಸುತ್ತಿದ್ದರು. ಈಗ ಈ ವಾದ್ಯವನ್ನು ಎಲ್ಲಾ ಬ್ಯಾಂಡ್ ಮತ್ತು ಫುಲ್ ಆರ್ಕೆಸ್ಟ್ರಾಗಳಲ್ಲಿ ಉಪಯೋಗಿಸುತ್ತಾರೆ.

-ಐಸಿರಿ ಪ್ರಸಾದ್



# ಹಿಜಾಬ್ –ಪುಸ್ತಕ ಪರಿಚಯ

ಗುರುಪ್ರಸಾದ್ ವೆಂಕಟರಾಮು

ಡಾ. ಗುರುಪ್ರಸಾದ್ ಕಾಗಿನೆಲೆಯವರು ಬರೆದಿರುವ ಹಿಜಾಬ್ ಕಾದಂಬರಿಯನ್ನು ಓದಿ ನನ್ನ ಅನಿಸಿಕೆಯನ್ನು ಹಂಚಿಕೊಳ್ಳಬಯಸುತ್ತೇನೆ.

ಕನ್ನಡ ಸಾಹಿತ್ಯದಲ್ಲಿ ಇಂದಿನ ಕಾಲಮಾನಕ್ಕೆ ಪ್ರಸ್ತುತ ಎನಿಸುವ ಬರಹಗಳ ಬಾಹುಳ್ಯ ಕಡಿಮೆ ಎಂದರೂ ತಪ್ಪಿರಲಿಕ್ಕಿಲ್ಲ. ಈ ಕೊರತೆಯನ್ನು ನೀಗಿಸುವ ದಿಕ್ಕಿನಲ್ಲಿ ಹಿಜಾಬ್ ಒಂದು ಯಶಸ್ವೀ ಕೃತಿ. ಹೊರದೇಶಗಳಲ್ಲಿ, ಅದರಲ್ಲೂ ಅಮೇರಿಕಾದಲ್ಲಿ ನೆಲೆಸಿರುವ ಭಾರತೀಯರ ಮನಮುಟ್ಟುವ ವಿಷಯಗಳು ಈ ಕಾದಂಬರಿಯಲ್ಲಿವೆ.

ವಲಸಿಗರ ಸಮಸ್ಯೆಗಳು, ವೀಸಾ, ಗ್ರೀನ್ ಕಾರ್ಡುಗಳ ತಲೆ ಬಿಸಿ, ಭಾವನಾತ್ಮಕ ದ್ವಂದ್ವಗಳು, ಧಾರ್ಮಿಕ ನಂಬಿಕೆಗಳು, ಸಂಘರ್ಷಗಳು ಹೀಗೆ ಗಂಭೀರ ವಿಷಯಗಳ ಸುತ್ತ ಸುತ್ತುವ ಹಿಜಾಬ್ ಕೊನೆಗೆ ಆತಂಕವಾದ, ಮತೀಯವಾದ, ಜನಾಂಗೀಯ ನಿಂದನೆ, ಶ್ವೇತವರ್ಣೀಯರಲ್ಲಿ ಹೆಚ್ಚುತ್ತಿರುವ ಅಸಮಧಾನಗಳವರೆಗೆ ಮುಟ್ಟುತ್ತದೆ. ಯಾವುದೇ ನಾಟಕೀಯತೆ ಅಥವಾ ಅಬ್ಬರಗಳಿಲ್ಲದೆ ಬಹಳ ಸಹಜವಾಗಿ ಕಥೆ ಹೇಳಿದ್ದಾರೆ ಲೇಖಕರು. ಈ ಸಹಜ ಶೈಲಿಯೇ ನನ್ನನ್ನು ಹಿಡಿದಿಟ್ಟುಕೊಂಡಿದ್ದು ಹಾಗೂ ಚಿಂತನೆಗೆ ಹಚ್ಚಿದ್ದು.




ಸತ್ಯ ಸಂಗತಿಗಳೂ, ಕಾಲ್ಪನಿಕ ವಿಷಯಗಳೂ ಬಹಳ ನಾಜೂಕಾಗಿ ಹೆಣೆಯಲ್ಪಟ್ಟಿವೆ. ಯಾವುದು ಸತ್ಯ, ಯಾವುದು ಕಲ್ಪನೆ ಎಂದು ಯೋಚಿಸುತ್ತಲೇ ರೋಮಾಂಚನವಾಯಿತು ನನಗೆ. (ಅಮೋಕಾ ಎಂಬ ಊರು ನಿಜಕ್ಕೂ ಇದೆಯಾ?, ಮಿನ್ನೆಸೋಟಾದಲ್ಲಿರುವ ಸೊಮಾಲಿಗಳ ಕಥೆ ಏನು ? ಎಂದು ಗೂಗಲ್ ನಲ್ಲಿ ಹುಡುಕಿದ್ದು ಸುಳ್ಳಲ್ಲ !)

ಕೊನೆಯ ಅಧ್ಯಾಯವಂತೂ ಬಹಳ ಪರಿಣಾಮಕಾರಿಯಾಗಿದೆ. ಕಾದಂಬರಿಯುದ್ದಕ್ಕೂ ಒಳಗೇ ಹರಿಯುವ ತಳಮಳಗಳಿಗೆ ಉತ್ತಮ ರೂಪಕವನ್ನು ಕಟ್ಟಿಕೊಡಲಾಗಿದೆ.
ಅಮೆರಿಕಾ ಎಂಬ ಮಾಯಾವಿ ದೇಶವನ್ನು ಅರಿತುಕೊಂಡವರಾರು? ಅವರವರು ದಕ್ಕಿಸಿಕೊಂಡಷ್ಟೇ ಅವರ ಪಾಲು ಎನ್ನುವ ಭಾವ ನನಗೆ ಆಪ್ತವಾಯಿತು.

ಬಹುಪಾಲು ವೃತ್ತಿ ಜೀವನದ ಮೂಲಕವೇ ಅಮೆರಿಕವನ್ನು ಅನುಭವಿಸುವ ನನಗೆ, ನನ್ನಂಥವರಿಗೆ ಒಂದು ಹೊಸ ದೃಷ್ಟಿಕೋನವನ್ನು ಹೊಳೆಸುತ್ತದೆ ಈ ಕಾದಂಬರಿ. ಅಮೆರಿಕನ್ನಡಿಗರೆಲ್ಲರೂ ಕೊಂಡು ಓದಲೇಬೇಕಾದ ಕೃತಿ.